# ಅಪರಂಜಿ

ಡಿಸೆಂಬರ್ 2003

ತಿಳಿನಗೆಯ ಕಾರಂಜಿ



ಪ್ರಕಾಶ್
ಶ್ರೀನಿವಾಸ ವೈದ್ಯ
ರಾವಬಹದ್ದೂರ್
ಶಿವು
ಬಾಗೂರು ಚಂದ್ರು
ಜಯಾಯಾಜಿ ಶಿರಾಲಿ
ನಾಚಿ
ಬಿ.ಆರ್. ನಾಗೇಶ್
ಪ್ರಕಾಶ್
ವಾಣಿ ಸುರೇಶ್
ಪ್ರೇಮಾ ಭಟ್
ಹೆಚ್. ಗೋಪಾಲಕೃಷ್ಣ

ಬಿಡಿ ಪ್ರತಿ: ರೂ. 5.00

*With Best Compliments from:*

# SVR Agencies

No. 2, 3rd Cross, Kalasipalyam,
New Extention
Bangalore - 560 002.

| | | |
|---|---|---|
| Grams : Equipments | : | Tel : 2222301<br>Fax : 080-2224497 |
| Distributors For | : | ASPEE Sprayers and Dusters for Agriculture And Horticulture. |
| CONSIGNMENT AGENTS FOR | : | M/S DSM ENGINEERING PLASTICS (INDIA) PVT. LTD.<br><br>Thermoplastic Ployster Granules (CENKITE)<br>Polyamide Granules (CENKALON) |






ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500
Ph: 3345259
email: aparanji@hotmail.com
website: aparanjimag.com


ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

## ಈ ಸಂಚಿಕೆಯಲ್ಲಿ

**ಸಂಪುಟ 21 ಡಿಸೆಂಬರ್ - 2003 ಸಂಚಿಕೆ - 3**


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನನ್ನ ದೃಷ್ಟಿಯಲ್ಲಿ ಹಾಸ್ಯ | ಶ್ರೀನಿವಾಸ ವೈದ್ಯ | 4 |
| ನಾಲ್ಕಾಣೆಯ ನೋವು | ರಾವಬಹದ್ದೂರ್ | 5 |
| ಮೂಲಿ ಕಾ ಪರಾಂಠ | ಶಿವು | 12 |
| ಅಪರಂಜಿ - ರಸಸಂಜೆ | ಬಾಗೂರು ಚಂದ್ರು | 15 |
| ಸ್ಟೋರಿ ಟೆಲ್ಲಿಂಗೋ... | ಜಯಾಯಾಜಿ ಶಿರಾಲಿ | 18 |
| F.I.I. | ನಾಚಿ | 22 |
| ಹಿಟ್ಲರ್ ಹುಟ್ಟುಹಬ್ಬ | ಬಿ.ಆರ್. ನಾಗೇಶ್ | 24 |
| ರಾ.ಶಿ. ಅವರ ಜೊತೆ | ಪ್ರಕಾಶ್ | 29 |
| ಅನಸೂಯ ಪ್ರಿಯಂವದೆ.... | ವಾಣಿ ಸುರೇಶ್ | 31 |
| ಆಧುನಿಕ ಸೀತೆ | ಪ್ರೇಮಾ ಭಟ್ | 38 |
| ಅಮ್ಮಾ ನಿನಗಾಣೆ | ಹೆಚ್. ಗೋಪಾಲಕೃಷ್ಣ | 40 |


ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು - 27




○ ಪ್ರಕಾಶ್

''ಎಲ್ಲ ರೀತಿಯ ಲಾಟರಿ ನಿಷೇಧ; ಕೇಂದ್ರ ಯತ್ನ''

**''ಆನ್‌ಲೈನ್ ಲಾಟರಿ; ಸಚಿವರ ಸಮರ್ಥನೆ'' ತೀರ ಒಂದರ ಕೆಳಗೆ ಒಂದು ಹಾಕಬಾರದು!!**

★★★

ಅಕ್ರಮ ದೇವಾಲಯ ನೆಲಸಮಕ್ಕೆ ಸೂಚನೆ
- ಸುದ್ದಿ

**ಸಕ್ರಮಗೊಳಿಸಲು ದೇವರೇ ಬರಬೇಕು!!**

★★★

ಒಂದು ವರ್ಷದಲ್ಲಿ ಪಿ.ಎಚ್.ಡಿ. ಪಡೆಯದಿದ್ದರೆ ವಜಾ; ಉಪನ್ಯಾಸಕರಿಗೆ ಎಚ್ಚರಿಕೆ
- ಸುದ್ದಿ

**ಆ ಫಿಲಾಸಫಿಯ ಬೆಲೆ ಏನು??**

★★★

ನಗರದಲ್ಲಿ ರೈಲು ಸೇವೆ; ಸಚಿವ ಯತ್ನಾಳ್
- ಪತ್ರಿಕೆ

**ಅವರ ಯತ್ನ ಸುಗಮವಾಗಲಿ!**

★★★

ಶಾಸಕರ ಭವನದಲ್ಲಿ ಎರಡು ಜೀವಂತ ಬಾಂಬ್‌ಗಳ ಪತ್ತೆ
- ಸುದ್ದಿ

**ಶಾಸಕರನ್ನ ಹೀಗೆ ವರ್ಣಿಸಬಾರದು!!**

★★★

ಪ್ರೇಮ ಕೃಷ್ಣ ಮುಖ್ಯಮಂತ್ರಿ ಆಗಲಿ

- ನಟಿ ತಾರಾ

ಸಧ್ಯ ಯಾವ ರಾಜ್ಯಕ್ಕೆ ಅಂತ ಹೇಳಿಲ್ಲ!!

★★★

ಪಾಪ್ ಗಾಯಕ ಮೆಹಂದಿ ಅವರು ತಮ್ಮ ಹೆಸರನ್ನ ಡಾಲರ್ ಮೆಹಂದಿ ಅಂತ ಬದಲಿಸುವುದಿಲ್ಲವಂತೆ!

★★★

ಗೋವಾದಲ್ಲಿ ತೇಲುವ ಚಿತ್ರಮಂದಿರ

- ಸುದ್ದಿ

ಅದರಲ್ಲಿ Titanic ತೋರಿಸುಲ್ಲ ತಾನೆ??


★★★

'ಇರಾಕ್‌ನಿಂದ ಓಡಿ ಹೋಗುವುದಿಲ್ಲ'


- ಜಾರ್ಜ್ ಬುಷ್

'ಅಲ್ಲಿಗೆ' ಓಡಿಹೋಗಿದ್ದೇ ತಪ್ಪು!!

★★★




ಐನ್‌ಸ್ಟೈನನ ಬೆಕ್ಕು



# ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ

## – ಶ್ರೀನಿವಾಸ ವೈದ್ಯ

ಬಿದ್ದು ಬಿದ್ದು ನಗುವದು ಅಥವಾ ಪಕ್ಕೆ ಹಿಡಿದುಕೊಂಡು ನಗುವದು ಮಾತ್ರ ಹಾಸ್ಯ ವೆಂದಾದರೆ ರಾವ ಬಹದ್ದೂರರ ''ನಾಲ್ಕಾಣೆಯ ನೋವು'' ಅಂತಹ ಹಾಸ್ಯವನ್ನು ಹುಟ್ಟಿಸುವದಿಲ್ಲ. ಆದರೆ ಓದುತ್ತಾ ಹೋದಂತೆ ಮೆಲ್ಲನೇ ಮೆಚ್ಚಿಗೆಯ ಸಂಕೇತವಾಗಿ ತುಟಿ ಬಿರಿದು ಸಂತಸ ಹೊರಚೆಲ್ಲುವದೂ ಹಾಸ್ಯವೆಂದಾದರೆ ರಾವಬಹದ್ದೂರರ ಈ ಚಿತ್ರ ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಕೃತಿಯಾಗಿದೆ.

ಇಲ್ಲಿ ಉತ್ತರ ಕರ್ನಾಟಕದ ಅಷ್ಟೇ ಅಲ್ಲ 'ಉತ್ತರೋತ್ತರ ಕರ್ನಾಟಕ'ದ ಆಲ್‌ಮೋಸ್ಟ್ ದಕ್ಷಿಣ ಮಹಾರಾಷ್ಟ್ರದ ಅಂದಿನ ಚಿತ್ರವಿದೆ. ಅಥಣಿ, ತೇಲಸಂಗ, ಪಚ್ಚಾಪುರ, ಹುಕ್ಕೇರಿರೋಡ, ಕುಡಚಿ, ಶೇಡಬಾಲ ದಂತಹ ಊರುಗಳ ಹೆಸರುಗಳೇ ನಮ್ಮಲ್ಲಿ ಕೆಲಕೆಲವು ಹಿರಿಯರಿಗೆ ನಾಸ್ಟಾಲಜಿಯಾದ ಸುಖ ನೀಡಬಹುದು.

ಈ ಪ್ರಬಂಧ ಬರೆದ ಕಾಲ ಗೊತ್ತಿಲ್ಲ. ಇದು ನನಗೆ 'ಮನೋಹರ ಗ್ರಂಥಮಾಲೆ'ಯವರು ಏಪ್ರಿಲ್ 1961 ರಲ್ಲಿ ಪ್ರಕಟಿಸಿದ ''ನಡೆದು ಬಂದ ದಾರಿ''ಯ ಮೂರನೇ ಸಂಪುಟದಲ್ಲಿ ದೊರೆತಿದೆ. ಪ್ರಬಂಧದಲ್ಲಿ ಚಿತ್ರಿಸಿದ ಬದುಕು ಇನ್ನೂ ಇಪ್ಪತ್ತು ವರುಷಗಳಷ್ಟು ಹಿಂದಿನದೆಂದು ತೋರುತ್ತದೆ. ಅದು 'ಸವಾರಿಗಾಡಿ' (ಎತ್ತಿನ ಬಂಡಿ) ಗಳಲ್ಲಿ ಪ್ರವಾಸಿಸ ಬೇಕಾಗಿದ್ದ ಕಾಲ 'ಹನಿಮೂನಿ'ನ ಕಲ್ಪನೆ ಆದೇ ತಾನೇ ಗರಿಗೆದರಿಕೊಳ್ಳುತ್ತಿದ್ದ ಕಾಲ, ಮಾಸ್ಟರ್ ವಿನಾಯಕರ 'ಬ್ರಹ್ಮಚಾರಿ' ಮರಾಠಿ ಚಿತ್ರ ಜಯಭೇರಿ ಹೊಡೆಯುತ್ತಿದ್ದ ಕಾಲ.

ಇಷ್ಟು ಸಾಕಲ್ಲವೇ ನಾಸ್ಟಾಲ್ಜಿಯಾ ಪಿಡೀತ ಮನಸ್ಸು ಹಿಂದೆ ಹಿಂದಕ್ಕೆ ಓಡಲು?

ಅದೇ ತಾನೇ ಮದುವೆಯಾದ ಮುಗ್ಧ ಯುವಜೋಡಿಯೊಂದು ನಾಲ್ಕು ದಿನ ಸಂತಸದಿಂದ ಕಳೆಯಲು ಕೊಲ್ಹಾಪುರ (ಮಹಾಲಕ್ಷ್ಮಿಯ ಯಾತ್ರಾಸ್ಥಳ)ಕ್ಕೆ ಹೋಗಿ, ಅಲ್ಲಿ ಗೋಪಾಲ ಭಡಜಿಯ ಆತಿಥ್ಯ ಸ್ವೀಕರಿಸಿ, ಕೈಯಲ್ಲಿಯ ಎಲ್ಲ ದುಡ್ಡು ಕಳೆದುಕೊಂಡು, ಕೊನೆಗೊಬ್ಬ ಇನ್ಶುರನ್ಸ ಏಜಂಟನ ಸಹಾಯದಿಂದ ಪಾರಾಗಿ ಬಂದು, ಆ ಋಣಕ್ಕೆ ತೆಗೆದುಕೊಂಡ ಇನ್ಶುರನ್ಸ ಪಾಲಿಸಿಯ ಮೇಲೆ ಇಪ್ಪತ್ತು ವರುಷಗಳವರೆಗೆ ಪ್ರೀಮಿಯಮ್ ಕಟ್ಟಿದ್ದು ಇಲ್ಲಿನ ಕಥಾವಸ್ತು.

ಇಂದಿಗೂ ಯಾತ್ರಾಸ್ಥಳಗಳಲ್ಲಿ ಗೋಪಾಲಭಡಜಿಗಳಿರುತ್ತಾರೆ, ಇಂದಿಗೂ ಇನ್ಶುರನ್ಸ ಏಜಂಟರಿದ್ದಾರೆ, ಮೆಕ್ಕೆಜೋಳ ಬಾಳೆ ಹಣ್ಣುಗಳಂತಹ ತಿಂಡಿ ತೀರ್ಥಗಳನ್ನು ಮಾರುವವರಿರುತ್ತಾರೆ, ಬಹುಶಃ ಅಂದಿನ ಬದುಕಿನ ಮುಗ್ಧತೆ ಮಾತ್ರ ಇಂದು ಕಾಣ ಸಿಕ್ಕಿತೋ ಹೇಗೋ ತಿಳಿಯದು.

ಅಪರಂಜಿ ಸಂಪಾದಕರು ವಿಧಿಸಿದ ಕೆಲವು ಇತಿ ಮಿತಿಗಳಲ್ಲಿ ನಾನು ಈ ಮಾಲಿಕೆಗೆಂದು ಆಯ್ದ ಆರು ಕೃತಿಗಳನ್ನು ಓದುಗರು ಮೆಚ್ಚಿಕೊಳ್ಳುತ್ತಾರೆಂದು ನಂಬಿದ್ದೇನೆ. ಹಾಗೆಯೇ 'ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ' ಎಂಬ ಚರ್ಚೆಯಲ್ಲಿ ನಾನು, ಕೆ.ವಿ. ಅಯ್ಯರರ ''ಇನ್ಸಪೆಕ್ಟರ್ ಗಧಾ''(ಸಮುದ್ಧೃತಾ), ಪರಶುರಾಮರ 'ವಿರಿಂಚಿ ಮಹಾರಾಜ' (ಕುರಿ ಹಿಂಡು), ಗೊರೂರರ 'ದೊಳ್ಳನ ಹರಕೆ' ಲಕ್ಕಿಯ ಗಂಡಂದಿರು (ವೈಯಾರಿ), ಅಲ್ಲದೇ ಪು.ಲ.ದೇಶಪಾಂಡೆ, ರಾ.ಶಿ., ಕಸ್ತೂರಿಯವರ ಅನೇಕ ಕೃತಿಗಳನ್ನು ಹೆಸರಿಸಬಯಸುತ್ತೇನೆ.

# ನಾಲ್ಕಾಣೆಯ ನೋವು

– ರಾವಬಹದ್ದೂರ

ಉದ್ರಿ, ಕೈಗಡ ಮತ್ತು ಸುಳ್ಳು ಈ ಮೂರು ಸಾಧನಗಳಿರುವವರೆಗೆ ಹಣದ ಅಭಾವವನ್ನು ನಾವು ಬಾಗಿಲಿಗೆ ಬಂದ ಭಿಕ್ಷುಕನಂತೆ ನಡೆಸಿಕೊಳ್ಳಬಹುದು. ಎಲ್ಲ ಕುಟುಂಬವತ್ಸಲರಂತೆ ನನ್ನ ಹಿರಿಯರೂ ಇದೇ ಶಕ್ತಿತ್ರಯದ ಸಹಾಯದಿಂದ ಸಂಸಾರ ರಥವನ್ನು ಸುಸೂತ್ರವಾಗಿ ಸಾಗಿಸಿಕೊಂಡು ಬಂದರು. ಅವರ ಈ ಸಂಪ್ರದಾಯವನ್ನು ನಾನು ಯಥಾಶಕ್ತಿ ಪಾಲಿಸಿಕೊಂಡು ಬಂದು ಮನೆತನದ ಹೆಸರಿಗೆ ಧಕ್ಕೆ ತಗಲದಂತೆ ನೋಡಿಕೊಂಡಿದ್ದೇನೆ. ಅಷ್ಟೇ ಏಕೆ, ಅಡಚಣಿಯೊಡನೆ ನಡೆವ ನಿತ್ಯ ಕುಸ್ತಿಯಲ್ಲಿ ಗೆದ್ದು ಸೆಡ್ಡು ಹೊಡೆದ ಹೆಮ್ಮೆಯೂ ನನಗೆ ದಕ್ಕಿದೆ. ಆದರೆ ಒಮ್ಮೆ ಮಾತ್ರ ನಾನು ಬಿದ್ದು ಕಡಿತ ತಿಂದೆ. ಆ ಸಂಗತಿ ಬಹಿರಂಗವಾಗಿರದಿದ್ದರೂ ಒಂದು ಅವಿಸ್ಮರಣೀಯವಾದ ಅಪಮಾನ ಹಾಗು ವಿವೇಕಗಳನ್ನು ಜಾಗೃತಗೊಳಿಸಿ, ಕ್ಷಣಕ್ಕೊಮ್ಮೆ ಎಣಿಸಿ ನೋಡುವ ಚಟವನ್ನು ಕಲಿಸಿ ಹೋಯಿತು. ಆಗ ಮಾಡಿದ ನಾಲ್ಕಾರು ಆಣೆಯ ಸಾಲಕ್ಕಾಗಿ ನಾನು ಇಪ್ಪತ್ತು ವರ್ಷ ದಂಡ ತೆರಬೇಕಾಯಿತೆಂದ ಮೇಲೆ ಅದನ್ನು ಮರೆಯುವುದಾದರು ಹೇಗೆ?

ನನ್ನ ಅನುಭವ ಹೃದಯಂಗಮವಾಗಿದ್ದರೂ ಅದರ ವಿವರಣೆ ಕೊಡಲು ಸಂಕೋಚವೆನಿಸುವದು. ಆದರು ಅದನ್ನು ನಿಮಗೆ ಹೇಳದೆ ಹೋದರೆ ನನಗೆ ಸಮಾಧಾನವೆನಿಸಲಾರದು. ಸಂಕ್ಷಿಪ್ತವಾಗಿ ಮುಖ್ಯ ಮಾತುಗಳನ್ನು ಮಾತ್ರ ತಿಳಿಸುವೆ. ವಿಷಯ ನಾಜೂಕಾದುದರಿಂದ ವಿವರಗಳನ್ನು ತಿಳಿಸಲು ಆಗ್ರಹಪಡಿಸಬೇಡಿರಿ. ನನ್ನ ಲಗ್ನವಾಗಿ ಒಂದು ವಾರ ಕಳೆದಿರಬಹುದು. ಬಂದ ಅಪ್ತೇಷ್ಟರಿಂದ ಮನೆ ತುಂಬಿ ಹೋಗಿತ್ತು. ನನ್ನ ಕೈ ಹಿಡಿದವಳನ್ನು ಕಂಡು ಮಾತಾಡಿಸುವ ಚಪಲವೇನೊ ನನ್ನಲ್ಲಿ ಸಾಕಷ್ಟಿತ್ತು. ಆದರೆ ಸಂಪ್ರದಾಯಸ್ಥ ಮನೆತನ. ಹಿರಿಯರೆದುರು ಗೌರವದಿಂದ ನಡೆದುಕೊಳ್ಳುವ ದುರಭ್ಯಾಸ ಬಿದ್ದ ನನಗೆ ಮನಸ್ಸಿನಲ್ಲಿದ್ದುದನ್ನು ಕೃತಿಗಿಳಿಸುವ ಧೈರ್ಯವಿರಲಿಲ್ಲ. ಈ ಕಾರಣದಿಂದ ನಾನು ಸ್ವಲ್ಪ ಉದಾಸೀನಭಾವದಿಂದ ಮೌನವ್ರತವನ್ನಂಗೀಕರಿಸಿದೆ.

ನನ್ನ ಅಣ್ಣ - ಅವನು ಅದೇ ಅಥಣಿಯಲ್ಲಿ ವಕೀಲನಾಗಿ ಪ್ರ್ಯಾಕ್ಟೀಸ್ ಪ್ರಾರರಂಭಿಸಿದ್ದ. ಒಂದಿಷ್ಟು ರಸಿಕ; ನನಗಿಂತ ಕುಶಾಗ್ರಮತಿ - ಲಗ್ನವಾದ ಏಳನೇ ದಿನ ರಾತ್ರಿ ''ನಾನು ಅಥಣಿಗೆ ಹೊರಡಬೇಕು. ಮದು ಮಕ್ಕಳನ್ನು ನನ್ನ ಸಂಗಡ ಕರೆದುಕೊಂಡು ಹೋಗುವೆ. ಅಲ್ಲಿ ನನ್ನ ಮಿತ್ರರು ನವದಂಪತಿಗಳನ್ನು ನೋಡಬೇಕೆಂದಿದ್ದಾರೆ.'' ಎಂದು ಹಿರಿಯರಿಗೆ ತಿಳಿಸಿ ನಮ್ಮ ಪ್ರಯಾಣದ ಸಿದ್ಧತೆ ಮಾಡಿಬಿಟ್ಟ. ಆಗ ಅಣ್ಣ ಹೇಳಿದ ಎಲ್ಲವನ್ನೂ ನಿಜವೆಂದೇ ನಂಬಿದ ನನಗೆ ಹಿಂದುಗಡೆ ತಿಳಿದು ಬಂತು, ಅದೆಲ್ಲ ನನಗಾಗಿಯೇ ಮಾಡಿದ್ದು ಎಂದು.

ನಮ್ಮೂರಿಂದ ಅಥಣಿಯವರೆಗೆ - ಇಪ್ಪತ್ತೇಳು ಮೈಲುಗಳನ್ನು - ನಾವು ಸವಾರಿ ಗಾಡಿಯಲ್ಲಿ ಪ್ರವಾಸ ಮಾಡಬೇಕಿತ್ತು. ಎರಡು ದಿನ ಸಾಲುವಷ್ಟು ಬುತ್ತಿಗಂಟು, ಏಳೆಂಟು ದಿನ ಸಾಲುವಷ್ಟು ಫಲಹಾರದ ಡಬ್ಬಿಗಳು ನಮ್ಮ ಬೆನ್ನು ಹತ್ತಿ ಅದೇ ಗಾಡಿಯಲ್ಲಿ ಬಂದು ಕುಳಿತವು. ಕುತೂಹಲ, ತಾರುಣ್ಯದ ಅವ್ಯಕ್ತ ಭಾವನೆಗಳನ್ನು ತುಂಬಿಕೊಂಡ ನಮ್ಮನ್ನು ಹೊತ್ತುಕೊಂಡು ಗಾಡಿ ಮುಂದೆ ಹೊರಟಿತು ಊರು ದಾಟುತ್ತಲೇ ನನ್ನ ಅಣ್ಣ ಏನೋ ಕೆಲಸದ ನೆಪ ಹೂಡಿ ಮರಳಿ ಮನೆಗೇ ಹೊರಟು ಹೋದ. ಹೋಗುವ ಮುಂದೆ ಐವತ್ತು ರೂಪಾಯಿ ನನ್ನ ಕೈಯಲ್ಲಿ ಕೊಟ್ಟು "ತೇಲಸಂಗದ ವರೆಗೆ ಗಾಡಿಯಲ್ಲಿ ಹೋಗಿ ಮುಂದೆ ಮೋಟಾರಿನಿಂದ ಅಥಣಿಗೆ ಹೋಗಿರಿ. ಅಲ್ಲಿ ಈವೊತ್ತು ರಾತ್ರಿ ವಸತಿ ಮಾಡಿ ನಾಳಿನ ದಿನ ನಮ್ಮ ಕುಲದೇವರಿಗೆ ಕೊಲ್ಹಾಪುರಕ್ಕೆ ಹೋಗಿರಿ. ಮುಂದೆ ನಿಮ್ಮ ಮನಸ್ಸಿಗೆ ಬಂದಲ್ಲಿ ಹೋಗಿ ಮರಳಿ ಅಥಣಿಗೆ ಬರ್ರಿ. ಜ್ವಾಕಿ..." ಎಂದು ಹೇಳಿ ಮೀಸೆಯಲ್ಲಿಯೆ ನಕ್ಕು ಹೋದನು.

ಅನಿರೀಕ್ಷಿತವಾಗಿ ಒದಗಿ ಬಂದ ಈ 'ಹನಿಮೂನ್' ಟ್ರಿಪ್ಪನ್ನು - ಮಧುಚಂದ್ರ ಎಂದು ಯಾರೋ ಅಂದಿದ್ದಾರೆ ಇದಕ್ಕೆ- ನೆನೆದು ನನಗೆ ಸಂತೋಷವೇ ಆಗಿದ್ದರೂ ಒಳಗೆ ಹಿಡಿದು ಬಿಟ್ಟಂತಾಗಿತ್ತು.

ಅಣ್ಣನ ಆಜ್ಞೆಯಂತೆ ಅಂದು ರಾತ್ರಿ ಅಥನಿಯ (ಅಣ್ಣನ) ಮನೆಯಲ್ಲಿ ವಸತಿ ಹಾಕಿದೆವು. ಮನೆಯಲ್ಲಿ ನಮ್ಮನ್ನು ಬಿಟ್ಟು ಮತ್ತಾರೂ ಇರಲಿಲ್ಲ. ನಾವೇ ಇಬ್ಬರು, ರಾಜಾ ರಾಣಿ. ಮದುವೆಯಾದ ಅದೇ ಹೊಸದರಲ್ಲಿ ದಂಪತಿಗಳ ಮನೋಭಾವ ಹೀಗೇ ಇರುವದಲ್ಲವೇ? ಮರುದಿನ ಕೊಲ್ಹಾಪುರಕ್ಕೆ ನಮ್ಮ ಪ್ರಯಾಣ ಎಳೆಸಿದೆವು. ಅಣ್ಣನ ಆಜ್ಞಾಪರಿಪಾಲನೆಯಲ್ಲಿ ಅಂದು ತೋರಿದ ದಕ್ಷತೆ ನನ್ನ ಜನ್ಮದಲ್ಲಿ ಬೇರಾವ ಕಾಲದಲ್ಲಿ ತೋರಿದಂತೆ ನನಗೆ ನೆನಪಿಲ್ಲ.

ಮಿರಜದಿಂದ ಕೊಲ್ಹಾಪುರದವರೆಗೆ ಸೆಕಂಡಕ್ಲಾಸದಲ್ಲಿ ಪ್ರವಾಸ ಮಾಡಿ ಕೊಲ್ಹಾಪುರದಲ್ಲಿಳಿದೆವು. ಒಂದು ಲಾಜಿಂಗ್ ಹೌಸಿಗೆ ಹೋಗಿ ಕ್ಯಾಂಪು ಹಾಕಬೇಕೆಂಬ ನನ್ನ ವಿಚಾರ ಕಾರ್ಯರೂಪಕ್ಕಿಳಿಯಲಿಲ್ಲ. ರೇಲ್ವೆ ನಿಲ್ದಾಣದ ಹೊರಗೆ ಬರುತ್ತಲೇ ಹತ್ತೆಂಟು ಭಡಜಿಗಳು ನಮ್ಮನ್ನು ಮುತ್ತಿ ಸುತ್ತುಗಟ್ಟಿದ್ದರು. ನನ್ನ ಹೆಂಡತಿ ಧರಿಸಿದ ಹಸಿರು ಬಳೆ, ಉಟ್ಟ ಹೊಸ ಸೀರೆ ನೋಡಿ ನವದಂಪತಿಗಳಿರಬೇಕೆಂದು ಅವರು ಆಗಲೆ ಗುರುತಿಸಿದ್ದರು. ನಮ್ಮ ಪೂರ್ವಜರು ತಮ್ಮಮನೆಯಲ್ಲಿಯೆ ಇಳಿದಿದ್ದರೆಂದು ದಾಖಲೆ ತೋರಿಸುವ ಖಟಪಿಟಿ ನಡೆಸಿದರು. ಪವಿತ್ರ ಯಾತ್ರಾಸ್ಥಳಕ್ಕೆ ಬಂದು ದೇವರ ಪೂಜಾರಿಗಳು ತಮ್ಮ ಮನೆಯಲ್ಲಿ ಬಂದು ಇಳಿದುಕೊಳ್ಳಲು ದುಂಬಾಲು ಬಿದ್ದಿರುವಾಗ ಲಾಹಿಂಗ್ ಹೌಸಿಗೆ ಹೋಗುವದು ಸರಿಯಲ್ಲವೆಂದು ನನ್ನಾಕೆ ಅಪ್ರತ್ಯಕ್ಷವಾಗಿ, ಮಾತಿಲ್ಲದೆ, ಭ್ರುಕುಟಿ ಮಧ್ಯದಿಂದ ಸೂಚಿಸಿದಳು. 'ಸರಕಾರದ ಮರ್ಜಿ' ಎಂದು (ಆಗಲೆ

ಸರಕಾರ ಆಗಿಬಿಟ್ಟಿದ್ದರು ನಮ್ಮವರು) ನಾನು ಒಪ್ಪಿದೆ. ಗೋಪಾಲ ಭಡಜಿ (ಆತನ ಹೆಸರು ಅಥವಾ ಯಾರಿಗೂ ಆ ಹೆಸರಿನಿಂದ ಕರೆದರೂ ನಡೆಯುವದು) ನಮಗಾಗಿ ಗೊತ್ತುಪಡಿಸಿದ ಟಾಂಗೆಯನ್ನು ಹತ್ತಿ ಅವನ ಮನೆಯನ್ನು ಸೇರಿದೆವು.

ಗೋಪಾಲ ಭಡಜಿಯ ಮನೆ ದೊಡ್ಡವಾಡೆಯಂತೆ ಹೊರಗಿನಿಂದ ಕಂಡರು ಅದರಲ್ಲಿ ಸೇರಿದ ಮೇಲೆ ಅವನ ವಶದಲ್ಲಿರುವದು ಅಟ್ಟದ ಮೇಲಿನ ಒಂದು ಪಡಸಾಲೆ, ಅವರ ಬದಿಗೇ ಒಂದು ಚಿಕ್ಕ ಅಡಿಗೆ ಮನೆ ಮಾತ್ರ ಎಂದು ಗೊತ್ತಾಯಿತು. ಉಳಿದ ಮನೆಯಲ್ಲಿ ನಾಲ್ಕೆಂಟು ಭಾಗ ಮಾಡಿ ಬಾಡಿಗೆಗೆ ಕೊಟ್ಟಿರುವದಾಗಿ ಅವನ ಪೇಶ್ವಾಯೀ ಮಾತಿನ ಐಟಿನಿಂದ ತಿಳಿದುಬಂತು.

ಗೋಪಾಳ ಭಡಜಿಯ ಸಾಂಪತ್ತಿಕ ಸ್ಥಿತಿ ಹೇಗೆಯೇ ಇರಲಿ, ಸಂತಾನ ಸಂಪತ್ತಿಯಲ್ಲಿ ಮಾತ್ರ ಅವನು ನಿಜವಾಗಿಯೂ ಅದ್ವಿತೀಯನೆನಿಸಿದನು. ಇಪ್ಪತ್ತು ವರ್ಷದ ಅವಿವಾಹಿತ ಮಗಳನ್ನು ಮೊದಲುಗೊಂಡು ಆರು ತಿಂಗಳ ಕೂಸಿನ ವರೆಗೆ ಅವನ ವಂಶವೃಕ್ಷ ವಿಸ್ತಾರವಾಗಿತ್ತು. ಅವನ ಹೆಂಡತಿಯು ತಾನು ಹನ್ನೆರಡು ಮಕ್ಕಳ ತಾಯಿ ಎಂದು ಅಭಿಮಾನದಿಂದ ಹೇಳಿಕೊಂಡು, ತನ್ನಂತೆ ಮಕ್ಕಳ ಭಾಗ್ಯವನ್ನು ನಮಗೂ ತಾಯಿ ಅಂಬಾಬಾಯಿ ಕರುಣಿಸಲೆಂದು ಹರಸಿದಳು. ಅವರ ಪಡಸಾಲೆ ಮೊದಲು ಭೋಜನಶಾಲೆಯಾಗಿ ನಂತರ ಎಲ್ಲರ ಶಯನಾಗಾರವಾಗಿ ಪರಿವರ್ತನೆ ಹೊಂದಿತು. ಗೋಪಾಳಭಡಜಿ ಒಂದು ಮೂಲೆಗೆ ಶಯನ ಹಾಕಿದರೆ ನನಗೊಂದು ಮೂಲೆ ಸಿಕ್ಕಿತು. ನಮ್ಮಿಬ್ಬರ ನಡುವೆ ಗೋಪಾಳ ಭಡಜಿಯ ಹನ್ನೆರಡು ಮಕ್ಕಳು, ಅವರ ಪತ್ನಿ ಮತ್ತು ಮತ್ತು ನನ್ನ ಪತ್ನಿ. ಬಡಜಿಯ ನಾಲ್ವರು ಅವಿವಾಹಿ ಹೆಣ್ಣುಮಕ್ಕಳಿಗೆ ನನ್ನ ಹೆಂಡತಿಯ ಮೇಲೆ ಅದೇಕೋ ಒಂದಿಷ್ಟು ಕಕ್ಕುಲತೆ ಹೆಚ್ಚು. (ಹಾಗೆ ನನಗೆ ತೋರಿತು) ಅವರು ಅವಳನ್ನು ಬಿಟ್ಟು ಅತ್ತಿತ್ತ ಕದಲುತ್ತಿರಲಿಲ್ಲ. ಜೇಲಿನಲ್ಲಿ ಕೈದಿಗಳು ಒಂದೇ ವಾರ್ಡಿನಲ್ಲಿ ಮಲಗಿದಂತೆ ಮಲಗಿರುವೆನೆಂದು ನನಗೆ ಅನಿಸಿತು. ಇಡಿ ರಾತ್ರಿ ನಿದ್ರೆ ಹತ್ತಲಿಲ್ಲ. ಹೇಗೆ ಹತ್ತೀತು? ಭಡಜಿಯ ಹೆಣ್ಣು ಮಕ್ಕಳು ರಾತ್ರಿಯುದ್ದಕ್ಕೂ ನಮ್ಮಾಕೆಯೊಡನೆ ಏನೇನೊ ಕುಚುಕುಚು ಹರಟೆ ಕೊಚ್ಚಿದ್ದೂ ನನ್ನ ನಿದ್ರಾಭಂಗಕ್ಕೆ ಕೆಲಮಟ್ಟಿಗೆ ಕಾರಣವಾಗಿತ್ತು.

ಭಡಜಿಯ ಪತ್ನಿಯ ಆಶೀರ್ವಾದ, ಅವರ ಮಕ್ಕಳ ಆತ್ಮೀಯ ಸ್ನೇಹಪೂರ್ಣ ನಡವಳಿಕೆ ನಮ್ಮಾಕೆಯನ್ನು ಮುಗ್ಧಗೊಳಿಸಿದ್ದವು. ಅದರ ಪರಿಣಾಮವಾಗಿ ಉಟ್ಟ ಸೀರೆಯೊಂದು ಬಡಜಿಯ ಮಗಳಿಗೆ ಸೇರಿತು. ಐದು ರೂಪಾಯಿ ನೋಟು ನನ್ನ ಕಿಸೆಯಿಂದ ಬಾಗಿನದ ತಟ್ಟೆಯನ್ನು ಅಲಂಕರಿಸಿತು. ಅಂಬಾಬಾಯಿಯ ನೈವೇದ್ಯಕ್ಕೆಂದು ಹತ್ತು ರೂಪಾಯಿ ನೋಟು ಭಡಜಿಯ ಹಸ್ತಗತವಾಯಿತು. ಸಾಯಂಕಾಲದೊಳಗಾಗಿ ನನಗರಿಯದಂತೆ ಇಪ್ಪತ್ತು ರೂಪಾಯಿ ನನ್ನ ಕೈಬಿಟ್ಟವು.

ಇನ್ನೊಂದು ದಿನ ಇರಲು ಭಡಜಿಯ ಕುಟುಂಬದ ಆಗ್ರಹ. ಕೂಡಲೇ ಗಾಡಿಗೆ ಹೊರಡಬೇಕೆಂದು ನನ್ನ ಒತ್ತಾಯ. ಅದೇನು ಸಾಧ್ಯವಾಗದಿದ್ದರೂ (ಮನೆಯಾಕೆಯೇ

ಮೂಗೆಳೆದ ಮೇಲೆ ಮಾಡುವದೇನು?) ಕೊನೆಗೆ ರಾತ್ರಿಯ ಗಾಡಿಗೆ ಬೆಳಗಾವಿಗೆ ಹೊರಟುಬಿಟ್ಟದ್ದಾಯಿತು.

ಸೆಕೆಂಡ್ ಕ್ಲಾಸದ ಬದಲು ಇಂಟರ್ ಕ್ಲಾಸ ಪ್ರವಾಸವೇ ವಿಹಿತವೆಂದು ನನ್ನ ಕಿಸೆ ಹೇಳಿತು. ಬೆಳಗಾವಿಯಲ್ಲಿ ನನ್ನ ಹಿರಿಯ ಅಕ್ಕನ ಮನೆ. ಅವಳು ಲಗ್ನಕ್ಕೂ ಬಂದಿರಲಿಲ್ಲ. ಹೊಸ ಮದುಮಕ್ಕಳು ಕೂಡ ಹೋಗಿ ಅವಳಿಂದ ಆಶೀರ್ವಾದ ಪಡೆಯುವದು, ಬೆಳಗಾವಿಯ ಪ್ರವಾಸ ಕೈಕೊಳ್ಳುವ ಮುಖ್ಯ ಕಾರಣವಾಗಿತ್ತು. ಬೆಳಗಾವಿ ನಿಲ್ದಾಣದಲ್ಲಿ ನಾವು ಇಳಿದಾಗ ರಾತ್ರಿ ಹನ್ನೆರಡು ಹೊಡೆದಿತ್ತು. ಆಗ ಅಕ್ಕನ ಮನೆಗೆ ಹೋಗುವದಕ್ಕಿಂತ ಮಹಾರಾಷ್ಟ್ರ ಭವನದಲ್ಲಿ ಒಂದು ಕೋಣೆಯನ್ನು ಬಾಡಿಗೆ ಹಿಡಿದು ಅಂದಿನ ರಾತ್ರಿ ಸುಖವಾಗಿ ನಿದ್ದೆಮಾಡಿ, ಮರುದಿನ ಅಕ್ಕನ ಮನೆಗೆ ಹೋಗುವ ಯೋಜನೆ ಮಾಡಿದ್ದಾಯಿತು. ಯೋಜನೆಯು ಯಶಸ್ವಿಯಾಯಿತೆಂದು ಮರುದಿನ ಹಸನ್ಮುಖರಾಗಿ ಎದ್ದು ನಮ್ಮಷ್ಟಕ್ಕೆ ನಾವೇ ಅಂದುಕೊಂಡೆವು.

ಅಕ್ಕನ ಮನೆಗೆ ಹೋಗಿ ಅವಳ ಆತಿಥ್ಯ ಆಶೀರ್ವಾದ ಸ್ವೀಕರಿಸಿ ಅಂದೇ ಮೇಲ್ ಗಾಡಿಯಿಂದ ಅಥಣಿಗೆ ಹೋಗುವದು ಅಗತ್ಯವೆಂದು ಹೇಳಿ ಅವಳ ಮನೆಯಿಂದ ಹೊರಟದ್ದಾಯಿತು. ರಾತ್ರಿ ಶೇಡಬಾಳ ಸ್ಟೇಶನ್ನಿನಲ್ಲಿ ವಸ್ತಿ ಬೀಳುವದು ನಮಗೆ ಇಷ್ಟವಿರಲಿಲ್ಲ. ಅಕ್ಕನ ಮನೆಯಿಂದ ಹೊರಟು, ಅಂದು ರಾತ್ರಿ ಮಹಾರಾಷ್ಟ್ರ ಭವನದಲ್ಲಿ ಮತ್ತೆ ಕ್ಯಾಂಪು ಮಾಡಿ, ''ಬ್ರಹ್ಮಚಾರಿ'' ಸಿನೇಮಾ ನೋಡಿಕೊಂಡು ಮರುದಿನ ಅಥನಿಗೆ ಹೊರಡುವ ಕಾರ್ಯಕ್ರಮ ಮಾಡಿಕೊಂಡಿದ್ದೆವು. ಅಂತೆಯೇ ನಮ್ಮ ಟಾಂಗಾ ಸ್ಟೇಶನ್ನಕ್ಕೆ ಹೊರಟಿದ್ದು ಮಹರಾಷ್ಟ್ರಭವನದ ಮುಂದೆ ಬರುರತ್ತಲೇ ನಿಲ್ಲಿಸಲು ಹೇಳಿದೆವು. ಟಾಂಗಾದಲ್ಲಿಯ ಸಾಮಾನು ಕೋಣೆಗೆ ಸಾಗಿಸಿ ಸಿನೇಮಾ ಮಂದಿರದತ್ತ ಹೊರಟೆವು. ಥಿಯೇಟರಿನಲ್ಲಿ ತಿಕೀಟು ತೆಗೆಯಬೇಕೆನ್ನುವಾಗ ನನ್ನ ಸೋದರ ಸೊಸೆ ಮತ್ತು ಅವಳ ಯಜಮಾನರು ಅದೇ ಸಿನೇಮಾ ನೋಡಲು ಬಂದುಬಿಡಬೇಕೆ? ''ಗಾಡಿ ಸಿಗಲಿಲ್ಲ. ಸಿನೇಮಾ ನೋಡಿ ರಾತ್ರಿ ಎಕ್ಸ್‌ಪ್ರೆಸ್ ಗಾಡಿಯಿಂದ ಹೋಗುವ ವಿಚಾರವಿದೆ'' ಎಂದು ಹೇಳಿ ಅವರ ಮನೆಯಲ್ಲಿ ನಿಲ್ಲದೆ ಹೊರಟ ತಪ್ಪು ಮುಚ್ಚಿಕೊಳ್ಳುವ ಪ್ರಾಯಶ್ಚಿತ್ತ ಎಂದು ಅವರಿಗೆಲ್ಲ ತಿಕೀಟು ತೆಗೆಸಿದ್ದಾಯಿತು. ರಾತ್ರಿ ಎಕ್ಸ್‌ಪ್ರೆಸ್ ಗಾಡಿಯಿಂದ ಹೊರಡುವ ವಿಚಾರಮೊದಲೇ ಇಲ್ಲವಾದ್ದರಿಂದ ಮತ್ತೆ ಮಹಾರಾಷ್ಟ್ರ ಭವನದಲ್ಲಿ ವಸ್ತಿ ಹಾಕಿದೆವು.

ಮರುದಿನ ಹಾಟೆಲ್ಲಿನ ಬಿಲ್ಲು ಪಾವತಿ ಮಾಡಿ ಟಾಂಗಾ ಮಾಡಿಕೊಂಡು ನಿಲ್ದಾಣಕ್ಕೆ ಬಂದಾಗ ನನ್ನ ಕಿಸೆಯಲ್ಲಿ ಕೇವಲ ಮೂರು ರೂಪಾಯಿ ಮಾತ್ರಾ ಉಳಿದಿದ್ದವು! ಬೆಳಗಾವಿಯಿಂದ ಶೇಡಬಾಳಕ್ಕೆ ಥರ್ಡ್‌ಕ್ಲಾಸ್ ತಿಕೀಟಿಗೆ ಒಂದೂವರೆ ರೂಪಾಯಿ. ಎರಡು ತಿಕೀಟಿಗೆ ಮಾತ್ರ ಸಾಲುವಷ್ಟೇ ಹಣ ಉಳಿದಿದೆ ಎಂದು ಅದೇ ವಿವಾಹವಾದ ಗಂಡನು ಹೆಂಡತಿಯ ಮುಂದೆ ಹೇಳುವದು ಸಾಧ್ಯವೆ? ಹಮಾಲನು ಸಾಮಾನು ಎತ್ತಲು ಬಂದಾಗ ''ಛೇ, ಯಾತಕ್ಕೆ?'' ಎಂದು ನಾನೇ ಟಾಂಗಾದಿಂದ ಎತ್ತಿಕೊಂಡು ಸಾಗಿದೆ. ತಿಕೀಟಿನ ಕಿಡಿಕಿಯ ಮುಂದೆ ನಿಂತು ಮೂರು ರೂಪಾಯಿ ಕೊಟ್ಟು ''ಎರಡು ಶೇಡಬಾಳಕ್ಕೆ

ಕೊಡ್ರಿ'' ಎಂದಾಗ ''ಇನ್ನು ನಾಲ್ಕು ಆಣೆ ಕೊಡಿ. ಇದೇ ಏಪ್ರಿಲ್ ಒಂದರಿಂದ ರೂಪಾಯಿಗೆ ಒಂದಾಣೆ ಸರ್ ಚಾರ್ಜ ಹೇರಲಾಗಿದೆ.'' ಎಂದು ತಿಕೆಟ್ ಮಾಸ್ತರ ಹೇಳಿದ. ನಾಲ್ಕಾಣೆಗಾಗಿ ಎಲ್ಲ ಕಿಸೆಗಳನ್ನೂ ನಾಲ್ಕು ಸಲ ಝಡತಿ ಮಾಡಿದೆ. ಕಿಸೆ ಬರಿದೆಂದು ಮನವರಿಕೆಯ್ಞಾದಾಗ ಮುಖ ಕಪ್ಪಿಟ್ಟಿತು. ಊರಿಗೆ ಹೋಗುವದಾಗಿ ಸಾಮಾನು ಸಮೇತ ನಿಲ್ದಾಣಕ್ಕೆ ಬಂದು ಈಗ ತಿಕಿಟಿಗೆ ಗತಿ ಇಲ್ಲವೆಂದು ಹೆಂಡತಿಗೆ - ಅದೂ ಹೊಸದಾಗಿ ಅದೇ ಬಂದ ಹಂಡತಿಗೆ - ತಿಳಿಸುವ ಬಗೆ ಹೇಗೆ? ಕುಬೇರನ ಮಗನಂತೆ ಕೊಲ್ಹಾಪುರದಲ್ಲಿ ಕೈ ಸಡಿಲ ಬಿಟ್ಟು ಖರ್ಚು ಮಾಡಿ ''ಪರವಾ ಇಲ್ಲ, ಕೃಪಣಶಿರೋಮಣಿ ಇಲ್ಲ, ನನಗಾಗಿ ಹಣ ವೆಚ್ಚ ಮಾಡುವ ಧಾರಾಳಿ'' ಎಂದು ಹೊಗಳಿಸಿಕೊಂಡು ಈಗ? ನನಗೆ ದಿಕ್ಕು ತೋಚದೆ ಕೆಲ ನಿಮಿಷ ಅಲ್ಲಿಯೇ ಪೆಚ್ಚು ಬಡಿದು ನಿಂತುಕೊಂಡಿದ್ದೆ. ಈಗ ಮರಳಿ ಅಕ್ಕನ ಮನೆಗೆ ಹೋಗಬೇಕು. ಅವಳಿಂದ ಗಾಡಿ ಖರ್ಚಿಗೆ ಹಣ ಪಡೆದು ಊರಿಗೆ ಹೊರಡುವದೊಂದೇ ದಾರಿ ಅನಿಸಿತು. ಆದರೆ ಅವಳೆಷ್ಟೋ ಆಗ್ರಹ ಪಡಿಸಿದರೂ ನಿಲ್ಲದೆ, ನಿನ್ನಿನ ದಿನವೇ ಅಥಣಿಗೆ ಹೋಗುವ ಅವಸರದ ಕೆಲಸವಿದೆ ಎಂದು ಹೇಳಿ ಹೊರಟು ಬಂದವರು ಈಗ ಪುನಃ ಮರಳಿ ಆವರ ಮನೆಗೆ ಹೋಗುವದಾದರೂ ಎಂತು? ''ನಿನ್ನೆ ರಾತ್ರಿ ಎಲ್ಲಿ ಇದ್ದಿರಿ?'' ಎಂದು ಕೇಳಿದರೆ? ಹೋಗಲಿ, ನಿಜವನ್ನೇ ಹೇಳಿ ಅವಳ ಕ್ಷಮೆ ಕೋರಬಹುದು ಅನ್ರಿ. ಆದರೆ ಹಣವಿಲ್ಲದ್ದಕ್ಕೆ ಅಕ್ಕನ ಮನೆಗೆ ಹೋಗಬೇಕಾಗಿ ಬಂತು ಎಂದು, ಅದೇ ಹೊಸದಾಗಿ ಬಂದ ಹೆಂಡತಿಗೆ ತಿಳಿಯಬಾರದಲ್ಲ. ಯಾವ ಹೊತ್ತು ಬಂದರು ತನ್ನ ಅಂಗೈಯಲ್ಲೆತ್ತಿ ಹಿಡಿಯುತ್ತೇನೆಂದು ನನ್ನನ್ನು - ಈ ಧೀರ ಗಂಭೀರನನ್ನು - ನಂಬಿದ ಆ ಸುಕುಮಾರಿಗೆ, ಎರಳೆಕಂಗದ ಮುಗ್ಧೆಗೆ, ನನ್ನ ಹತ್ತಿರ ಹಣ ಇಲ್ಲಾ ಎಂದು ಹೇಳಿ ನನ್ನ ಕ್ಷುದ್ರ್ಯತನವನ್ನು ಹೇಗೆ ವ್ಯಕ್ತಪಡಿಸಲಿ? ಅಂತೇ ಧೈರ್ಯಸಾಲದೆ ಮಂಕನಾಗಿ ನಿಂತಿದ್ದೆ.

ಅಷ್ಟರಲ್ಲಿ ಗಾಡಿ ಬಂದು ನಿಂತಿತು. ನನ್ನ ಹೆಂಡತಿ ''ಗಾಡಿ ಹತ್ತಲು ಒಳಗೆ ನಡೆಯಿರಲ್ಲ'' ಎಂದು ಎಚ್ಚರಿಕೆ ಕೊಟ್ಟಳು. 'ಹೂಂ' ಎಂದವನೇ ಯಾರದೋ ದಾರಿ ಕಾಯುತ್ತ ನಿಂತವನಂತೆ ನಿಲ್ದಾನದ ಹೊರಗೆ ನೋಡುತ್ತ ನಿಂತುಕೊಂಡೆ. ಆಗ ನನ್ನ ಸುದೈವದಿಂದಲೇ ಎನ್ನಿ, ನಮ್ಮ ಅಣ್ಣನ ಸ್ನೇಹಿತನೊಬ್ಬ ಅವಸರದಿಂದ ಬಂದು ತಿಕಿಟ್ ಕಿಡಿಕಿಯತ್ತ ಸಾಗಿದ. ಅವನನ್ನು ತಡೆದು ''ಎಲ್ಲಿಗೆ ಹೋಗುವದು?'' ಎಂದು ದೇಶಾವರಿ ನಗೆ ನಕ್ಕು ಕೇಳಿದೆ. 'ಶೇಡಬಾಳಕ್ಕೆ ಹೋಗಿ ಮುಂದೆ ಅಥನಿಗೆ ಹೋಗಬೇಕು. ನಿಮ್ಮ ಅನ್ನ ಅಥಣಿಯಲ್ಲಿರುವರಷ್ಟೆ?'' ಎಂದು ಕೇಳಿದ. ''ಇದ್ದಾರೆ. ಈ ರೂಪಾಯಿ ತಕ್ಕೊಳ್ಳಿ. ನನಗೆರಡು ತಿಕೀಟು ತಗಿಯಿರಿ'' ಎಂದು ಹತ್ತಿರ ಇದ್ದಷ್ಟು ರೂಪಾಯಿ ಕೊಟ್ಟು ಸುಮ್ಮನೆ ನಿಂತಲ್ಲಿಯೇ ನಿಂತುಕೊಂಡೆ.

ಅವನು ಹತ್ತು ರೂಪಾಯಿ ನೋಟು ಕೊಟ್ಟು ಮೂರು ತಿಕೀಟು ತೆಗೆದ. ನಾನು ನಾಲ್ಕಾಣೆ ಕಡಿಮೆ ಕೊಟ್ಟದ್ದು ಅವನಿಗೆ ತಿಳಿಯಿತೋ ಇಲ್ಲವೊ ನಾ ಕಾಣೆ. ನನ್ನ ಮೇಲಿನ

ಮೂಷ್ಟಿಮೊಂದು ಅಪಮಾನದ ಭಾರ ಇಳಿದಂತಾಗಿತ್ತು. ಅವನನ್ನು ಒಳಗೊಳಗೇ ಹಾಡಿ ಹರಸುತ್ತಿದ್ದೆ. ಅವನು ಮುಂದಾಗಿ ಹೋಗಿ ಗಾಡಿಯಲ್ಲಿ ಸ್ಥಳ ಒಡಿದ. ಹಿಂದಿನಿಂದ ನಾವೂ (ರಾಜಾ-ರಾಣಿ!) ಹತ್ತಿದೆವು.

ಇಲ್ಲಿಗೇ ನನ್ನ ಸಮಸ್ಯಾ ಪರಿಹಾರವಾಯಿತೆಂದು ಬಹಳ ಉಬ್ಬಿದ್ದೆ. ಶೇಡಬಾಳದಿಂದ ಅಥಣಿಗೆ ಹೋಗುವ ಮೋಟಾರ ಕಂಪನಿಯ ಮಾಲಕ ನಮ್ಮ ಅಣ್ಣನ ಪಕ್ಷಕಾರ. ಅಲ್ಲಿ ನಮ್ಮಣ್ಣನ ಹೆಸರು ಹೇಳಿ ತಿಕೀಟು ತೆಗೆಯದೆ ಪ್ರವಾಸ ಮಾಡಬಹುದೆಂಬ ಧೈರ್ಯವಿತ್ತು. ಆದರೆ ಗಾಡಿಯಲ್ಲಿ ಕುಳಿತ ಮೇಲೆ ಹಣದ ಕೊರತೆ ಪುನಃ ಪುನಃ ನನ್ನ ಎದೆಯಲ್ಲಿ ನಡಹತ್ತಿತ್ತು. ಪಚ್ಚಾಪುರ ಸ್ಟೇಷನದಲ್ಲಿ ಮೆಕ್ಕಿ ಜೋಳದ ತೆನೆ ಮಾರುವವಳು ಬಂದಳು. ಮೆಕ್ಕಿತೆನೆ ಮಾರುವವಳಿಗೆ ಇದೇ ಗಾಡಿ, ಇದೇ ಹೊತ್ತು ಬೇಕಾಗಿತ್ತೆ? ನನ್ನ ಕೈಯಲ್ಲಿ ಕಾಸಿಲ್ಲದಾಗ ಈ ಪುಣ್ಯವಂತಿ ಏಕೆ ಬರಬೇಕು? ಜಗತ್ತೆ ನನ್ನ ವಿರುದ್ಧವಾಗಿ ಸಂಚು ಹೂಡಿದಂತೆ ಕಂಡಿತು. ಹೆಂಡತಿಯ ಮುಂದೆ ನನ್ನ ಮಾನ ಉಳಿಯುವಂತೆ ಕಾಣಲಿಲ್ಲ. ನಿಜ ಹೇಳಬೇಕೆಂದರೆ ಪಾಪ! ಅವಳ ತಪ್ಪಿಲ್ಲ. ತೆನೆ ಕಂಡು ನನ್ನ ಬಾಯಲ್ಲಿಯೂ ನೀರು ಊರಿತ್ತು. ಆ ಮೆಕ್ಕಿ ತೆನೆಯ ವಾಸನೆ ಯಾರನ್ನಾದರೂ ಕೊಳ್ಳಲು ಹೆಚ್ಚುವಂತಿತ್ತು. ನನ್ನ ಹೆಂಡತಿ ಎರಡು ತೆನೆ ತಕ್ಕೊಂಡಳು. ''ಒಂದಾಣೆ ಕೊಡ್ರಿ'' ಎಂದು ಮೆಲುದನಿಯಲ್ಲಿ ಹೇಳಿದಳು. ನಾನು ಕಿಸೆಯಲ್ಲಿ ಕೈಹಾಕಿ ನೋಡಹತ್ತಿದೆ. ನನ್ನ ಅಣ್ಣನ ಮಿತ್ರ ತಾನೇ ಒಂದಾನೆ ತನ್ನ ಕಿಸೆಯಿಂದ ತೆಗೆದುಕೊಟ್ಟು ನನ್ನನ್ನು ಪಾರುಮಾಡಿದ.

ಹುಕ್ಕೇರಿ ರೋಡು ಮಸಾಲಿ ಹಾಲಿಗೆ ಪ್ರಸಿದ್ಧ. ನಮ್ಮ ಡಬ್ಬಿಯಲ್ಲಿದ್ದವರಲ್ಲಿ ನಾಲ್ಕಾರು ಜನರು ಮಸಾಲಿ ಹಾಲು ತರಿಸಿ ತಕ್ಕೊಂಡರು. ಅದನ್ನು ನೋಡಿ ಮನೆಯಾಕೆ ''ನಾವೂ ತಕ್ಕೋಳಣವೇ?'' ಎಂದು ಸೂಚಿಸಿದಾಗ ''ಛೇ, ಮೈದಾ ಹಿಟ್ಟು ಬೆರಸಿದ ಹಾಲು. ಅದನ್ನೇನು ಕುಡಿದೀ!'' ಎಂದು ನಾನು ಹೇಳಿ ಉಪಾಯದಿಂದ ಮಾರ್ಯದೆ ಉಳಿಸಿಕೊಂಡೆ. ಆದರೆ ನನ್ನ ಅಣ್ಣನ ಮಿತ್ರ ನಮ್ಮನ್ನು ಕೇಳದೆ ಮೂರು ಹಾಲಿಗೆ ಆರ್ಡರ್ ಕೊಟ್ಟ. ಇನ್ನೇನು, ಕೊಂಡ ಹಾಲು ಕೆಡಿಸಬಾರದೆಂದು ನಾನೂ ನನ್ನ ಪಾಲಿನ ಗ್ಲಾಸು ಬರಿದುಮಾಡಿದೆ. 'ಹನಿಮೂನಿ'ಗೆಂದು ಹೊರಟ ನಾನು (ನವಪತಿ) ಹೆಂಡತಿಗೆ (ನವಪತ್ನಿಗೆ) ಹಾಲು ಕುಡಿಸಲು ಒಂದಾಣೆಗೆ ಗತಿ ಇಲ್ಲದೆ ಯಾರೋ ಮಿತ್ರರು ಕೊಡಿಸಿದ್ದನ್ನು ಕುಡಿಯುವ ಪ್ರಸಂಗ ಬಂದದ್ದನ್ನು ನೆನೆದು ನನ್ನ ಮನಸ್ಸು ಆಗ ''ಹಣವಿಲ್ಲದವ ಹೆಣಕ್ಕಿಂತ ಕಡೆ'' ಎಂದುಕೊಂಡಿತು.

ಇಂಥ ಪ್ರಸಂಗಗಳು ಮೇಲಿಂದ ಮೇಲೆ ಇನ್ನು ಬರಬಾರದೆಂದು ತಿಳಿದು, ನಮ್ಮಾಕೆ ಗಾಡಿಯಲ್ಲಿಯ ಕಕ್ಕಸಕ್ಕೆ ಹೋದಾಗ ಸಮಯ ಸಾಧಿಸಿ ರೆಹಸ್ಯವಾಗಿ ''ನನ್ನ ಕಡೆಗೆ ಹಣವಿಲ್ಲ. ಊರಿಗೆ ಹೋಗುವವರೆಗೆ ಚಿಲ್ಲರೆ ವೆಚ್ಚಕ್ಕೆ ಎರಡು ರುಪಾಯಿ ಕೊಡ್ರಿ. ಅಥಣಿಯಲ್ಲಿ ಕೊಡುವೆ.'' ಎಂದು ಆ ನಮ್ಮಣ್ಣನ ಮಿತ್ರನಿಗೆ ಕೈಯೊಡ್ಡಿದೆ.

''ಛೇ, ಹಾಗೇನು ಅಪರಿಚಿತರಂತೆ ನನ್ನನ್ನು ಕಾಣಬೇಡಿರಿ. ನಿಮ್ಮಿಂದ ಉಪಕಾರ ಬಹಳ ಆಗಿದೆ ನಮಗೆ. ಊರಿಗೆ ಮುಟ್ಟುವವರೆಗೆ ಎಲ್ಲ ವೆಚ್ಚ ನನ್ನದು.'' ಎಂದು ಅವರು ಹೇಳಿಬಿಟ್ಟರು.

ನನಗೆ ಸಮಾಧಾನವಾಗಲಿಲ್ಲ. ಆದರೂ ಸುಮ್ಮನಿದ್ದೆ. ರಾಯಬಾಗದಲ್ಲಿ ಬಾಳೇ ಹಣ್ಣಿನ ಖರೀದಿ ಆಯಿತು. ಕುಡಚಿಯಲ್ಲಿ ಬದನೆಕಾಯಿಯನ್ನು ಕೊಂಡದ್ದಾಯಿತು. ಶೇಡಬಾಳದಲ್ಲಿ ಹಮಾಲರಿಗು ನಮ್ಮ ಸಮಾನು ಹೊರಕ್ಕೆ ಮೋಟರಿಗೆ ಸಾಗಿಸುವ ಕೆಲಸ ಸಿಕ್ಕಿತು. ಮೋಟಾರ ತಿಕೀಟನ್ನೂ ಕೊಂಡು ಮುಂದಿನ ಕಂಪಾರ್ಟಮೆಂಟಿನಲ್ಲಿ ಸುಖವಾಗಿ ಪ್ರವಾಸ ಮಾಡುವದೂ ಸಾಧ್ಯವಾಯಿತು.

ಅಂದು ನಮ್ಮಣ್ಣನ ಮಿತ್ರರು ನಮ್ಮಲ್ಲಿಯೇ ವಸತಿ ಮಾಡಿದರು. ಅವರಿಗೆ ನಾನು ಇಲ್ಲಿಯವರೆಗೆ ಅವರು ನನಗಾಗಿ ಖರ್ಚು ಮಾಡಿದ ಹಣವನ್ನು ತಿರುಗಿ ಕೊಡಲು ಹೋದಾಗ ಅವರು ''ರಾಮ! ರಾಮ! ನಿಮ್ಮಿಂದ - ನಿಮ್ಮಂಥವರಿಂದ ಹಣ ತೆಗೆದುಕೊಳ್ಳಲಾ? ಬೇಡ. ಆ ಹಣ ನನಗೆ ಕೊಡಬೇಕಾಗಿಲ್ಲ. ಅದನ್ನು ಕೊಡುವದೇ ನಿಮ್ಮ ಮನಸ್ಸಿನಲ್ಲಿದ್ದರೆ ಇಗಾ, ಈ ವಿಮಾ ಪಾಲಿಸಿ ತಗೊಳ್ಳಲು ಒಪ್ಪಿರಿ. ಅಂದರೆ ನಿಮಗೇ ಹಿತವಾದೀತು. ಇಂತಹ ಹೊತ್ತಿಗೆ ಉಪಯೋಗವಾಗಿದೀತು. ಮದುವೆಯಾಗಿದ್ದೀರಿ ಈಗ. ಜವಾಬ್ದಾರಿ ಬೆಳೀತು. ನಾಳೇ ಮೆಡಿಕಲ್ ಪರೀಕ್ಷೆ ಮುಗಿಸಿ "Proposal" ಕಳಿಸಿಯೇ ಊರಿಗೆ ಹೋಗುವೆ ಬೇಕಾದರೆ. ಪ್ರತ್ಯುಪಕಾರ ಎಂದೇನೂ ಅಲ್ಲ ಮತ್ತೆ....'' ಎಂದು ಹೇಳಿದರು.

''ಓಹೋ, ಅದಕ್ಕೇನು, ಒಪ್ಪಿಗೆ. ಹಣವಿಲ್ಲದ ಅನುಭವ ನನಗೆ ಬಂದಾಗ ನೀವು ದೇವರಾಗಿ ಬಂದು ನನ್ನ ಮರ್ಯಾದೆ ಉಳಿಸಿದಿರಿ. ಅದಕ್ಕೆ ಇದು ಹೆಚ್ಚೇ?'' ಎಂದು ಉತ್ತರಿಸಿದೆ.

ಆಗ ಅವರು ಹೇಳಿದರು: ''ನಿಮ್ಮ ಮಾತು ನನಗೆ ಒಪ್ಪಿಗಿಲ್ಲ. ಹಣ ಇರಲಿ, ಇಲ್ಲದಿರಲಿ; ಅದು ಮುಖ್ಯ ಅಲ್ಲ. ನಿಮ್ಮ ಅಣ್ಣನ ಸ್ನೇಹದ ಬಲ ನನಗಿರುವುದರಿಂದ ಒಂದು ಲಕ್ಷ ರೂಪಾಯಿ ವಿಮೆಯ ಕೆಲಸ ಮೂರು ತಿಂಗಳಲ್ಲಿ ಸಾಧಿಸಿತು. ಜನರ ಸ್ನೇಹದ ಬಲ ಮುಖ್ಯ. ಹಣದ ಬಲ ಅದರ ಹಿಂದೇ ಬರೆಯತ್ತದೆ. ಬೆಳಗಾಂವಿಯಲ್ಲಿ ನೀವು ಮೂರು ರುಪಾಯಿ ಕೊಟ್ಟು ತಿಕೀಟು ತೆಗೆಸಲು ಹೇಳಿದಾಗಲೇ ನಿಮ್ಮ ಕೈ ಖಾಲಿ ಆದದ್ದು ನಾನು ಗ್ರಹಿಸಿದೆ. ಅಂತೆಯೇ ನಿಮಗೆ ಯಾವ ಅಡಚಣೆ ಆಗದಂತೆ ನೋಡಿಕೊಂಡೆ. ನಿಮಗೆ ಹಣ ಮುಖ್ಯ ಎನಿಸಿತ್ತು. ಆಗ. ಅದು ಮುಖ್ಯ ಅಲ್ಲ. ಸ್ನೇಹಿತರನ್ನು ಗಳಿಸುವುದು ಮುಖ್ಯ.''

ವಿಮಾ ಪಾಲಿಸಿಗೆ ನಾನು ಸಹಿ ಮಾಡಿದಾಗ ಅವನು ''ಉಪಕಾರವಾಯಿತು'' ಎಂದದ್ದು ಕೇವಲ ಶಿಷ್ಟಾಚಾರವಾಗಿರಲಿಲ್ಲ.

★★★

# ಮೂಲಿ ಕಾ ಪರಾಂಠ

– ಶಿವು

''ಹಸಿವಾಗ್ತಾ ಇದೆ. ಯಾವ್ದಾದ್ರೂ ಇಡ್ಲಿ ಹೋಟೆಲ್ ಹತ್ರ ನಿಲ್ಲಿಸ್ರೀ'' ಇಂದು ತನ್ನ ಅಹವಾಲನ್ನು ಮಂಡಿಸಿದಳು. ಮಾಮೂಲು ಸಮಯದಲ್ಲಾಗಿದ್ರೆ, ರಮೇಶ ''ನೋಡೋಣ, ತಾಳು, ಹೈವೇ ಅಂದಮೇಲೆ ಒಂದಲ್ಲಾ ಒಂದು ಹೋಟೆಲ್ ಇರ್ಲೇ ಬೇಕು'' ಅಂತ ಸಾವಧಾನದಿಂದ ಉತ್ತರಿಸುತ್ತಿದ್ದ. ಆದರೆ ಇವತ್ತು ರಮೇಶ್ ರೆಬೆಲಿಯಸ್ ಮೂಡಿನಲ್ಲಿದ್ದ. ಮಗಳ ಮದುವೆ ಆದ ಮೇಲೆ ತಾನು ತನ್ನತನಾನ ತೋರಿಸ್ಕೋ ಬೇಕು, ಇವಳ ಬ್ಲಾಕ್‌ಮೇಲ್ಗೆ ಮಣೀಬಾರ್ದು ಅಂತೆಲ್ಲಾ ಕನಸು ಕಾಣುತ್ತಿದ್ದ ರಮೇಶನಿಗೆ, ಅಸ್ಸರ್ಟ್ ಮಾಡ್ಕೊಳ್ಳೋಕ್ಕೆ ಈಗ ಕಾಲ ಸನ್ನಿಹಿತವಾಗಿದೆ ಅನ್ನಿಸ್ತು.

''ಉಪ್ಪಿನಂಗಡೀಲೇ ಹೇಳ್ದೆ. ಬಾತ್‌ರೂಮ್‌ಗೆ ಹೋಗಬೇಕಾದ್ರೆ, ತಿಂಡಿ ಕಾಫಿ ಬೇಕಾದ್ರೆ ಇಲ್ಲೇ ಹೇಳು. ಮುಂದೆ ಘಟ್ಟ ಹತ್ತಿ ಸಕಲೇಶಪುರ ತಲುಪ್ಪೋ ವರ್ಗೂ ಒಂದು ಹನಿ ನೀರೂ ಸಿಗುಲ್ಲ ಅಂತ. ಕೇಳ್ಬೇಕಲ್ಲಾ ನನ್ನ ಮಾತ್ನ'' ಅಂತ ಹೇಳಿ ಇಂದುವಿನ ಪ್ರತಿಕ್ರಿಯೆಗಾಗಿ ಕಾದ.

ಹೊರಗೆ ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ದಂಪತಿಗಳು ತಮ್ಮ ಕೆಂಪು ಮಾರುತಿಯಲ್ಲಿ ಮಂಗಳೂರು ಬಿಟ್ಟಾಗ ಮಧ್ಯಾಹ್ನ ಒಂದು ಘಂಟೆ. ಘಟ್ಟದ ಏರು ಹಾದಿಯ ಎಡ ಬದಿಯಲ್ಲಿ ಮಳೆಯ ನೀರು ಒಂದು ಕೃತಕ ಝುರಿಯನ್ನೇ ಸೃಷ್ಟಿಸಿತ್ತು.

''ಅಲ್ಲಿ ಹಶಿವಾಗ್ತಾ ಇರ್ಲಿಲ್ಲ. ಈಗ ಆಗ್ತಾ ಇದೆ. ಅಷ್ಟಕ್ಕೆಲ್ಲಾ ಯಾಕೆ ಹಾಗೆ ರೇಗಬೇಕು?''

''ಇಲ್ಲೇ ಕಾರು ನಿಲ್ಸಿಸಿ, ನಡಕೊಂಡೇ ಬೆಂಗಳೂರಿಗೆ ಹೋಗ್ತೀನಿ'' ಅಂತೆಲ್ಲಾ ಟ್ಯಾಂಟ್ರಮ್ ತೆಗೆಯುತ್ತಿದ್ದ ಮುದ್ದಿನ ಮಡದಿ, ಈಗ ಈ ರೀತಿ ರಾಜಿ ದನಿಯಲ್ಲಿ ಮಾತನಾಡಿದ್ದು ಕೇಳಿ ರಮೇಶನಿಗೆ ಖುಷಿ ಆಯಿತು.

''ಇಲ್ಲೆಲ್ಲಾ ಇಡ್ಲಿ ಹೋಟೆಲು ಇರುಲ್ಲಾ ಕಣೇ, ಏನಿದ್ರೂ ಪಂಜಾಬಿ ಧಾಭಾಗಳು ಇರುತ್ವೆ. ಪೆಟ್ರೋಲ್ ಟ್ಯಾಂಕರುಗಳ ಚಾಲಕರಿಗೆ ಪೆಟ್ರೋಲ್ ಒದಗಿಸಬೇಕಲ್ಲಾ, ಅಂಥಾ ಕಡೆ ಎಲ್ಲಾದರೂ ನಿಲ್ಲಿಸ್ತೀನಿ.''

''ಧಾಭಾ ಅಲ್ಲಾರೀ, ಢಾಭಾ. ತೀರ ಅಪ್ಡೇಟಿಳೀದೇನ್ರೀ. ಖಂಡಿತಾ ಢಾಭಾ ಬೇಡ. ಅವೆಲ್ಲಾ ತೀರಾ ಕೊಳಕು''

''ಓಹೋಹೋ, ನೀನು ಯಾವ ಮಹಾರಾಣೀ ಅಂತ ಇಲ್ಲಿ ದಾರೀ ಪಕ್ಕದಲ್ಲಿ ಫೈವ್ ಸ್ಟಾರ್ ಹೋಟೆಲ್ ಮಡಗಿರ್ತಾರೆ.''

ರಮೇಶ ಮನದಲ್ಲೇ ಆ ಮಹಾ ಸರಸ್ವತಿಗೆ ವಂದಿಸಿದ. ಸಧ್ಯ ಸರಿಯಾದ ಸಮಯಕ್ಕೆ ಮಡಗು ಪದ ಹೊಳೀತಲ್ಲಾ.

''ಥೂ ಹಾಗೆಲ್ಲಾ ಮಡಗು ಗಿಡಗು ಅನ್ನಬೇಡ್ರಿ. ನನಗೆ ಮೈ ಪರಚಿಕೊಳ್ಳೋ ಹಾಗೆ ಆಗುತ್ತೆ'

That was the object of the excercise my darling ಅಂತ ರಮೇಶ ಮನಸ್ಸಿನಲ್ಲೇ ಅಂದುಕೊಂಡ.

ಕಾರು ಮಳೆಯಲ್ಲಿ ನಿಧಾನವಾಗಿ ಚಲಿಸುತ್ತಿತ್ತು. ರಸ್ತೆಯ ತಿರುವುಗಳನ್ನು ಸ್ವಲ್ಪ ಮಟ್ಟಿಗೆ ನೇರ ಮಾಡುವ ಯತ್ನದಲ್ಲಿ ರಸ್ತೆ ರಿಪೇರಿಯವರು ತಿರುವುಗಳಲ್ಲಿ ಧಾರಾಳವಾಗಿ ಅಡೆ ತಡೆಗಳನ್ನು ನಿಲ್ಲಿಸಿದ್ದರು.

''ಅದೇನ್ರೀ ಅದು ವಿಚಿತ್ರ ಶಬ್ದ?'' ಇಂದುವಿನ ಪ್ರಶ್ನೆ.

''ಯಾವ ಶಬ್ದಾನೇ''

''ಅದೇರೀ, ಒಂದು ನೂರು ಸೇಫ್ಟಿ ಪಿನ್ನುಗಳನ್ನ ಒಂದು ಸ್ಟೀಲ್ ಲೋಟದಲ್ಲಿ ಹಾಕಿ ಕುಲುಕಿದ ಶಬ್ದ''

''ಹ್ಹ ಹ್ಹ ಹ್ಹ ಕಾರುಗಳಲ್ಲಿ ಆ ತರಹಾ ಶಬ್ದ ಯಾವುದೂ ಬರಲ್ವೇ.''

''ಹ್ಹ ಹ್ಹ ಹ್ಹ ಅಂತೆ. ಕಳೆದ ಬಾರಿ ಶಿವಮೊಗ್ಗಾಗೆ ಹೋಗ್ತಾ ಇದ್ದಾಗ ದಾರೀಲಿ ಬೇರಿಂಗ್ ಸವೆದು ಸುಟ್ಟು ಹೋಗಿದ್ದಾಗ ಬಂದ ಸದ್ದನ್ನು ಹೇಳಿದ್ದು ಯಾರೋ?''

''ನೀನು ಹೇಳೋ ಹೊತ್ತಿಗೆ ಅದು ಸುಟ್ಟು ಸ್ವರ್ಗ ಸೇರಿತ್ತು. ಆವಾಗ ಹೇಳಿದ್ರೆ ಏನು ಪ್ರಯೋಜನ. ಅದಿರ್ಲಿ, ಅಲ್ನೋಡು, ಅಲ್ಲೇ ಬಲಗಡೆ ಒಂದು ಧಾಭಾ ಕಾಣಿಸ್ತಾ ಇದೆ. ಅಲ್ಲಿ ನಿಲ್ಲಿಸ್ತೀನಿ. ಏನು ಸಿಗುತ್ತೋ ಅದನ್ನ ತಿಂದು ಮುಂದೆ ಹೋಗೋಣ. ನನಗೂ ಹಸೀತಾ ಇದೆ.''

ಕಾರು ನಿಲ್ಲಿಸಿ ರಮೇಶ, ಇಂದು ಢಾಭಾ ಕಡೆ ನಡೆದರು. ಅದೊಂದು ತೆಂಗಿನ ಸೋಗೆ ಹೊದಿಸಿದ್ದ ಗುಡಿಸಲು. ಮುಂದೆ ಎರಡು ಹಗ್ಗದ ಮಂಚಗಳು, ಮಂಚಗಳ ಮಧ್ಯೆ ಒಂದು ಮುರುಕಲು ಮೇಜು. ದಂಪತಿಗಳು ಒಬ್ಬೊಬ್ಬರು ಒಂದೊಂದು ಮಂಚದ ಮೇಲೆ ಕುಳಿತರು. ಒಬ್ಬ ಲುಂಗಿಧಾರಿ ಯುವಕ ಇವರಿಬ್ಬರ ಮಧ್ಯೆ ಪ್ರವೇಶಿಸಿ, ತನ್ನ ಕೈಲಿದ್ದ ಹರುಕಲು ಟವಲಿನಿಂದ ಮೇಜನ್ನು ಶುಭ್ರವಾಗಿ ಒರೆಸಿ, ''ಎನ್ನಾ ವೇಣುಂ?'' ಅಂತ ಕೇಳಿದ. ರಮೇಶನ ''ಎನ್ನಾ ಇರುಕ್ಕು?'' ಎಂಬ ಮರುಪ್ರಶ್ನೆಗೆ ''ಮೂಲಿ ಕಾ ಪರಾಂಠ'' ಎಂಬ ಉತ್ತರ ಬಂತು.

''ಪಿನ್ನೆ ಇನ್ನೆನ್ನಾ?''

''ಸರಸೋಂಕಾ ಸಾಗ್ ಇರುಕ್ಕು''

''ಇಂದು, ನಿನಗೇನು ಬೇಕು ಹೇಳು, ಮೂಲಂಗಿ ಚಪಾತಿ, ಸರಸಮ್ಮನ ಸಾಗು ಇದೆಯಂತೆ.''

''ನನಗೇನೂ ಬೇಡ. ನಾನು ಕಾರಿನಲ್ಲೇ ಕೂತಿರ್ತೀನಿ. ಅದೇನು ಬೇಕೋ ನೀವು ತಿನ್ಕೊಂಡು ಬನ್ನಿ'' ಎನ್ನುತ್ತಾ ಇಂದು ಕಾರಿನ ಕಡೆ ನಡೆದಳು.

ರಮೇಶ ಮೂಲಿ ಪರಾಂಠ, ಸರಸೋಂಕಾ ಸಾಗ್ ಆರ್ಡರ್ ಮಾಡಿ, ಹೊಸದಾಗಿ ಸಂಪಾದಿಸಿದ ತನ್ನ ಸ್ವಾತಂತ್ರ್ಯವನ್ನು ಒಂದು ಸಗಿರೇಟ್ ಹಚ್ಚಿ ಆಚರಿಸಿದ. ಆ ತಮಿಳ ಕೊಟ್ಟ ಆಹಾರ ತಿಂದು, ಅವನು ಬೆರೆಸಿದ ಸಕ್ಕರೆ ಪಾನೀಯ ಕುಡಿದು ರಮೇಶ್ ಕಾರಿಗೆ ಬರುವ ಹೊತ್ತಿಗೆ, ಅವನ ಮೂಡು ಖಂಡಿತವಾಗಿ ಅಪ್‌ಬೀಟ್ ಆಗಿತ್ತು ಅಂತ ಹೇಳಬಹುದು.

ಕಾರಿನಲ್ಲಿ ಕುಳಿತು, ಸ್ಟಾರ್ಟ್ ಮಾಡಿ ಹೊರಟಾಗ, ''ಅವನು ಟೇಬಲ್ ಒರೆಸಿದ ಬಟ್ಟೆ ನೋಡಿದ್ರಾ, ಹಿಂದಿನ ಟೇಬಲ್ಲಿನ ಅಗಳುಗಳೆಲ್ಲಾ ಅದಕ್ಕೇ ಮೆತ್ತಿಕೊಂಡಿತ್ತು. ಅದೇನೂ ಅಂತ ಇಂಥ ಕಡೆ ಬರ್ತೀರೋ'' ಅಂದಳು ಇಂದು.

ರಮೇಶ್ ಈ ಆಹ್ವಾನಕ್ಕೆ ನೇರ ಉತ್ತರ ನೀಡಲಿಲ್ಲ. ಬದಲಿಗೆ ''ನನ್ನ ಪ್ರೇಮದ ಹುಡುಗಿ, ತಾವರೆಯ ಹೊಸಕೆಂಪು'' ಎಂದು ಹಾಡಲು ಪ್ರಾರಂಭಿಸಿದ. ಬುಲ್ ಫೈಟಿಂಗ್‌ನಲ್ಲಿ ಗೂಳಿಗೆ ಕೆಂಪು ಟವಲು ತೋರಿಸುಲ್ವೇ, ಆ ಶಕ್ತಿ ಇತ್ತು ಈ ಕವನಕ್ಕೆ ಅಂತ ರಮೇಶನಿಗೆ ಅನುಭವದಿಂದ ತಿಳಿದಿತ್ತು. ಹಿಂದೆ ಯಾವಾಗಲೋ ಯಾವುದೋ ಗುಂಡಿನ ಪಾರ್ಟಿಯಲ್ಲಿ ಅವನು ಈ ಹಾಡನ್ನು ಹೇಳಿದಾಗ ಅವನ ಪುರ್ವಾಶ್ರಮದ ಗೆಳೆಯರೊಬ್ಬರು ಇಂದುವಿಗೆ ಈ ಹಾಡಿನ ಪೂರ್ವಾಪರಗಳನ್ನು ಮಸಾಲೆ ಹಚ್ಚಿ ಊದಿಬಿಟ್ಟಿದ್ದರಂತೆ. ಆಗಿನಿಂದ ಈ ಹಾಡು ಅವರಿಬ್ಬರ ನಡುವೆ ಟಾಬೂ ಆಗಿತ್ತು. ತನ್ನ ಹೊಸ ಸ್ವಾತಂತ್ರ್ಯದ ಎಲ್ಲೆಗಳನ್ನು ಪರೀಕ್ಷಿಸಲೊ, ಅಥವಾ ಗ್ರಹಚಾರ ಚೆನ್ನಾಗಿಲ್ಲದಿದ್ದುದರಿಂದಲೋ ರಮೇಶ್‌ನ ಕಂಠದಿಂದ ಈ ಕವನ ಹೊರಹೊಮ್ಮಿ ಕಾರನ್ನು ತುಂಬಿತು.

ಇಂದುವಿನ ರಮೇಶನ ಮುಂದೆ ತನ್ನ ಕೋಪವನ್ನು ತೋರಿಸಿಕೊಳ್ಳುವ ಇಚ್ಛೆ ಇರಲಿಲ್ಲ. ಹಾಗಾಗಿ, ಪ್ರತಿಕ್ರಿಯೆ ಇರಲಿ, ತನ್ನ ಹುಬ್ಬೂ ಸಹಾ ಗಂಟು ಬೀಳದಂತೆ ಎಚ್ಚರ ವಹಿಸಿದ್ದಳು. ಒಮ್ಮೆಲೇ ಅವಳಿಗೆ ಏನೋ ಕೇಳಿಸಿದಂತಾಯಿತು. ನೂರು ಪಿನ್ನುಗಳ ಸದ್ದು ಈಗ ಸಾವಿರಕ್ಕೆ ಏರಿತ್ತು. ತನ್ನದೇ ಕಂಠಮಾಧುರ್ಯವನ್ನು ಸವಿಯುತ್ತಿದ್ದ ರಮೇಶನಿಗೆ ಈ ಏಲಿಯನ್ ಸದ್ದಿನ ಪರಿವೆಯೇ ಇದ್ದಂತಿರಲಿಲ್ಲ. ಇಂದುವಿನ ತುಟಿಯಂಚಿನಲ್ಲಿ ಮೆಲುನಗೆಯೊಂದು ಮಿಂಚಿತು. ಮೆಲ್ಲನೆ ತಲೆಯನ್ನು ಹಿಂದಕ್ಕೊರಗಿಸಿ, ಕಣ್ಣುಗಳನ್ನು ಮುಚ್ಚಿ, ಮುಂದೆ ಕಾದಿದ್ದ ವಿದ್ಯಮಾನಗಳನ್ನು ಆನಂದ ತುಂಬಿದ್ದ ಕಾತರದಿಂದ ನಿರೀಕ್ಷಿಸಲು ಅನುವಾದಳು ಇಂದು.

★★★

# ಅಪರಂಜಿ ರಸಪಂಜಿ

– ಬಾಗೂರು ಚಂದ್ರು

ಅಪರಂಜಿಯ ಇಪ್ಪತ್ತರ ಹುಟ್ಟುಹಬ್ಬದ ಸಂಭ್ರಮದ ವರದಿಯನ್ನು ನೀವಾಗಲೇ ಓದಿರುತ್ತೀರಿ. ಇದು ಇನ್ನೊಂದು ವರದಿಯಲ್ಲ. ಅಂದಿನ ಸಮಾರಂಭದ ಹಿಂಬೆಂಚಿನ ಪ್ರೇಕ್ಷಕನೊಬ್ಬನ ವೈಯಕ್ತಿಕ ಪ್ರತಿಕ್ರಿಯೆ. ಹಿಂಬೆಂಚಿನಲ್ಲಿ ಕುಳಿತಿದ್ದಕ್ಕೇ ಒಂದೇ ಕಾರಣ ಮುಂದಿನದಿರಲಿ ಮಧ್ಯದ ಸಾಲುಗಳಲ್ಲಿಯೂ ಜಾಗ ಸಿಗದಿದ್ದದ್ದು. ಒಂದು ಪತ್ರಿಕೆಯ ಹುಟ್ಟುಹಬ್ಬದ ಬಗೆಗೆ ಜನರಲ್ಲಿ ಇಷ್ಟೊಂದು ಉತ್ಸಾಹ ಅಪರಂಜಿ ಬಳಗಕ್ಕೆ ಸೇರಿದವರಿಗೆಲ್ಲಾ ಖುಷಿಯ ವಿಷಯ. ಹಿಂಬೆಂಚಿನಲ್ಲಿ ಒಂಟಿಯಾಗಬೇಕಾಗಲಿಲ್ಲ. ನನ್ನೂರಿನ ಕೇಶವಮೂರ್ತಿ ನೀರುಗುಂದ ಅಲ್ಲಿಗೆ ಬಂದರು. ಹೆಸರಾಂತ ಸಾಹಿತಿ ಚಿ. ಶ್ರೀನಿವಾಸ ರಾಜು ನನಗೂ ಹಿಂದಿನ ಪಂಕ್ತಿಯಲ್ಲಿದ್ದರು.

ಭುವನೇಶ್ವರಿ ಹೆಗಡೆ ಧಾರವಾಡ ಕಾಲೇಜಿನ ವಿದ್ಯಾರ್ಥಿನಿಯಾಗಿ ಸಮೃದ್ಧವಾಗಿ ನಕ್ಕದ್ದು ನಮ್ಮನ್ನು ನಗಿಸಿದ್ದು ಮೊನ್ನೆ ಮೊನ್ನೆ ಎನಿಸುವಂತಿದೆ. ನಾನು ದೆಹಲಿಯಲ್ಲಿ ಒಂದೆರಡು ದಿನ ಅವರ ಲೋಕಲ್ ಗಾರ್ಡಿಯನ್ ಬೇರೆ ಆಗಿದ್ದೆ. ಆದರೆ ಈಚೆಗೆ ಅವರನ್ನು ನೋಡಿರಲಿಲ್ಲ. ಅಪರಂಜಿಯ ಹುಟ್ಟು ಹಬ್ಬದ ಆಹ್ವಾನ ಪತ್ರಿಕೆಯಲ್ಲಿ ಅವರನ್ನು ಹಿರಿಯರೆಂದು ಕರೆದದ್ದು ನನಗೆ ಚೂರು ಗೊಂದಲ ತರಿಸಿತ್ತು. ಯಾರೋ ಜಾಣ ಮುದುಕರು ವಯಸ್ಸಾದವರನ್ನು ಜನ ಮುದುಕ ಬುಡ್ಡಾ ಎಂದು ಕರೆಯದಿರಲಿ ಎಂದು ಹಿರಿಯ ನಾಗರಿಕ-ಸೀನಿಯರ್ ಸಿಟಿಜೆನ್ ಪದಗಳಿಂದ ಸೃಷ್ಟಿಸಿಕೊಂಡಿರಬೇಕು. ಮುಂದೆ ಸರ್ಕಾರ ಅರವತ್ತೈದು ತುಂಬಿದವರು ಹಿರಿಯರು ಎಂದು ಕಾನೂನು ಮಾಡಿದೆ. ಮಹಿಳೆಯರಿಗೆ ಐದು ವರ್ಷದ ರಿಯಾಯಿತಿಯಿದೆ ಎಂದು ಒಪ್ಪಿಕೊಂಡರೂ ಭುವನೇಶ್ವರಿಯನ್ನು ಹಿರಿಯರ ಮಹಿಳೆಯಾಗಿ ಊಹಿಸಿಕೊಳ್ಳುವುದು ನನಗೆ ತುಂಬಾ ಕಷ್ಟವಾಗಿತ್ತು. ಅವರನ್ನು ವೇದಿಕೆಯ ಮೇಲೆ ನೋಡಿದಾಗ ನನ್ನ ನೆನಪಿನ ತರುಣಿಯಾಗಿಯೇ ಅದಕ್ಕಿಂತ ಸ್ವಲ್ಪ ಕಿರಿಯರಂತೆ ಕಂಡದ್ದು ಸಮಾಧಾನ ತಂದಿತು. ಹಿರಿಯ ಪದಕ್ಕೆ ನಾನು ಕೊಟ್ಟುಕೊಂಡಿದ್ದ ಅರ್ಥ ಸರಿಯಲ್ಲ ಅಪರಂಜಿಗೆ ಅವಳಿಗಿಂತ ದೊಡ್ಡವರೆಲ್ಲಾ ಹಿರಿಯರು ಎನ್ನುವುದು ತಿಳಿಯಿತು.

ಪ್ರಾರಂಭದಲ್ಲಿಯೇ ಅಪರಂಜಿ ಶಿವಕುಮಾರ್ ಹಾಸ್ಯ ಸಾಹಿತಿ ಎಂದರೆ ಜೋಕ್ ಹೇಳುವವನು ಎಂದು ಜನ ನಿರೀಕ್ಷಿಸುತ್ತಾರೆ ಎಂದು ಹೇಳಿದ್ದು ಅಂದಿನ ಚರ್ಚೆಯ ಥೀಮ್ ಆಯಿತು. ಮುಂದೆ ಎಚ್.ಎಲ್. ಕೇಶವಮೂರ್ತಿ, ಶ್ರೀನಿವಾಸ ವೈದ್ಯ ಈ ಚರ್ಚೆಯನ್ನು ಮುಂದುವರಿಸಿದರು. ವೈದ್ಯ, ಹಾಸ್ಯ ಸಾಹಿತ್ಯ ಮತ್ತು ಮುಖ್ಯಧಾರೆಯ ನಡುವಿನ ಸಂಬಂಧದ ಮತ್ತೊಂದೆರಡು ವಿಷಯಗಳನ್ನು ಎತ್ತಿದ್ದರು. ಈ ಚರ್ಚೆಗೆ ನಾನೂ ಅರೆಕಾಸಿನ ಕಾಣಿಕೆ ಸಲ್ಲಿಸಬಹುದೇನೋ.

ಇಂದು (ಮತ್ತು ಹಿಂದೆಯೂ) ಹಾಸ್ಯ ಸಾಹಿತ್ಯ ಎಂದು ಕರೆಯುವ ಲೇಖನಗಳು ವಸ್ತುವಿನಲ್ಲಿ ಸಾಹಿತ್ಯ ಮತ್ತು ಜರ್ನಲಿಸಂ - ಪತ್ರಕಾರಿಕೆಗಳ ಮಿಶ್ರಣ; ಬರೆಯುವ ರೀತಿ ಸಣ್ಣಕತೆ ಎಸ್ಸೆ-ಲಘುಪ್ರಬಂಧಗಳ ಮಿಲನದ ಹೇಸರಗತ್ತೆ. ಪತ್ರಕಾರಿಕೆ ಎಂದರೆ ಅವಸರ, ಇಂದು ಆಸಕ್ತಿಕರ ಎನ್ನಿಸಿದ ವಿಷಯಗಳು ನಾಳೆಗೆ ತಂಗಳಾಗುತ್ತವೆ ಎನ್ನುವ ಅರಿವು. ಅಪರಂಜಿ-ರಸರಂಜಿಯಲ್ಲಿನ ಹೆಚ್ಚಿನ ಲೇಖನಗಳು ಇಂದಿಗೂ ನಗೆ ತರಿಸುತ್ತಿವೆ ಅವುಗಳಲ್ಲಿ ಪತ್ರಕಾರಿಕೆಗೆ ಮೀರಿದ್ದು ಏನೋ ಇದೆ ಎನ್ನುವುದನ್ನು ಗಮನಿಸಬಹುದು. ಜೋಕುಗಳು ಒಂದು ಮಟ್ಟದ ಪನ್‌ಗಳಲ್ಲಿ ಮಾತ್ರ ಹಾಸ್ಯವೊಂದೇ ರಸವಾಗಬಹುದೇನೋ. ಅಂದು ಸನ್ಮಾನಿತರಾದ ಅಪರಂಜಿ ಬಳಗಕ್ಕೆ ಸೇರಿದ ಇನ್ನೂ ಅನೇಕ ಲೇಖನಗಳಲ್ಲಿ ಹಾಸ್ಯ ಮುಖ್ಯವಾದರೂ ಬೇರೆ ರಸಗಳು ಇರುತ್ತವೆ, ಇರಲೇ ಬೇಕು. ವೈದ್ಯರ ಬಾಸಿಂಗಬಲ ಅವರೇ ಆರಿಸಿದ ಮುಖ್ಯಧಾರೆಯ ಮಹತ್ವದ ಕತೆಗಳಿಗಿಂತ ಯಾವುದರಲ್ಲಿ ಕಡಿಮೆ.

ನನ್ನಂತಹ ಅರವತ್ತು ಮೀರಿದವರಿಗೆ (ಇದರಲ್ಲಿ ನಾನು ವೈದ್ಯರನ್ನು ಸೇರಿಸುತ್ತಿಲ್ಲ) ನಿನ್ನೆ ಬಹಳ ಸುಂದರವಾಗಿ ಕಾಣಿಸುತ್ತದೆ. ಆದರೆ ಇಂದು ಅಪರಂಜಿಯಲ್ಲಿನ ಅದರಲ್ಲೂ ಮಹಿಳೆಯರು ಬರೆಯುತ್ತಿರುವ ಲೇಖನಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಲವಲವಿಕೆ ಕಾಣಿಸುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳಲೇ ಬೇಕು. ಈಗ ಕೈಸೇರಿರುವ ಸಂಚಿಕೆಯಲ್ಲಿಯ ಬರಹಗಾರರು 6; ಬರಹಗಾರ್ತಿಯರು 4. ಅವರಲ್ಲಿ ಯಾರೂ ಮೀಸಲಾತಿಯನ್ನು ಕೇಳಿದವರಲ್ಲ.


ರಾಶಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು, ಗೊರೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಇಂದು ಅಂತಹ ಪರಿಸ್ಥಿತಿಯಿಲ್ಲ ನಿಜ. ಇದಕ್ಕೆ ಕಾರಣಗಳು ಎರಡು. ಮಾಸ್ತಿ (ರಂಗಸ್ವಾಮಿಯ ಕತೆಗಳು), ಕುವೆಂಪು (ಮಲೆನಾಡಿನ ಚಿತ್ರಗಳು), ಕಾರಂತ (ದೇವದೂತರು, ಗ್ನಾನ) ಬೇಂದ್ರೆ (ವರೆದಾ ತಿಗಣಿ ವರೆದಾ) ಹಾಸ್ಯವನ್ನು ತಿರಸ್ಕರಿಸಲಿಲ್ಲ. ಅನಾಥ ಪ್ರಜ್ಞೆ, ಏಕಾಕಿತನದ ನವ್ಯರು ಅವರ ಮುಂದಿನವರು ಹಾಸ್ಯ ನಿಷಿದ್ಧ ಎಂದು ಬೋರ್ಡ್ ಹಾಕಿಕೊಂಡು ಹಾಸ್ಯವನ್ನು ದೂರವಿಟ್ಟರು, ಈಗಲೂ ಆ ಬೋರ್ಡ್ ಅಲ್ಲೇ ಇರುವಂತಿದೆ. ಪತ್ರಿಕೆಗಳು ನಡೆಸುವ ಕಥಾ ಸ್ಪರ್ಧೆಗಳಲ್ಲಿ ದೊಡ್ಡ ದೊಡ್ಡ ಮೊತ್ತದ ಬಹುಮಾನ ಪಡೆಯುವ ಕತೆಗಳಲ್ಲಿ ಎಂದಾದರೂ ಹಾಸ್ಯ ಇರಲಿ ಚೂರು ಲವಲವಿಕೆಯನ್ನು ಎಲ್ಲಾದರೂ ನೋಡಿದ್ದೀರಾ?

ಇನ್ನೊಂದು ಕಡೆ ಬಹುಶಃ ಟೀವಿಯ ಪ್ರಭಾವದಿಂದ ಹಾಸ್ಯ ಸಾಹಿತ್ಯ spectator game ಆಗುತ್ತಾ ಬಂದಿತು. ಹಾಸ್ಯ ಲೇಖಕನಿಗಿಂತ ಹಾಸ್ಯ ಭಾಷಣಕಾರನಿಗೆ ಹೆಚ್ಚಿನ ಜನಪ್ರಿಯತೆ ಸಿಕ್ಕಿತು. ನಿಲುಕದ ದ್ರಾಕ್ಷಿ ಹುಳಿ, ನಿಜ. ನಿಲುಕದಿದ್ದರೂ ಕೊಂಡ ಅನೇಕ ರಖಂ ದ್ರಾಕ್ಷಿ ಬಾಯಿ ಚಪ್ಪರಿಸುವಷ್ಟು ರುಚಿ ಎನ್ನುವುದನ್ನು ಡಿಸಂಬರ್ 25

ಹಾಸ್ಯೋತ್ಸವಗಳಲ್ಲಿ ಅನುಭವಿಸಿದ್ದೇನೆ. ಆದರೆ ಇದೇ ಉತ್ಸವದ ಇಂದಿನ ಅನೇಕ ಇಮಿಟೇಷನ್‌ಗಳಲ್ಲಿ ಹುಳಿ ಮಾತ್ರವಲ್ಲ, ತುಂಬಾ ಕಹಿ ತಳಿಗಳೂ ಕಾಣಿಸಿಕೊಂಡಿವೆ. ಜೊತೆಗೆ ಹಾಸ್ಯ ಭಾಷಣ ಪ್ರಕಾರ ಬೀಚಿ ಸಾಡಿಗೇರರ ಸಾಧನೆಗಳನ್ನು ಪರಿಚಯಿಸಬಹುದು ಆದರೆ ಲಾಂಗೂಲಾಚಾರ್ಯ ಅಥವಾ ಪಡುಕೋಣೆ ಅವರುಗಳ ಲೇಖನಗಳಲ್ಲಿ ಜೋಕ್ ಹುಡುಕಿದರೆ ಅವರಿಗೆ ನ್ಯಾಯ ಸಿಗಲು ಸಾಧ್ಯವೇ?

ಕೇಶವಮೂರ್ತಿಯವರು ಜಿ.ಎಸ್.ಎಸ್. ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಪ್ರಾರಂಭಿಸಿದ ಪ್ರತಿವರ್ಷ ಒಂದು ವಿನೋದ ಸಾಹಿತ್ಯ ಕೃತಿ ಕೊಡುತ್ತಿದ್ದ ಮನ್ನಣೆ ಇದ್ದಕ್ಕಿದ್ದ ಹಾಗೆ ಮರೆಯಾದದ್ದುನ್ನು ಪ್ರಸ್ತಾಪಿಸಿದರು. ಹಾಸ್ಯಬ್ರಹ್ಮ ಟ್ರೇಡ್ ಯೂನಿಯನ್ ಆಗಿದ್ದಿದ್ದರೆ ಸದಸ್ಯರು ಅಕಾಡೆಮಿಯ ಮುಂದೆ ಬೇಕೇ ಬೇಕು ಅವಾರ್ಡ್ ಬೇಕು ಎಂದು ಕೂಗಿ ಪ್ರೈಮ್ ಟೈಂ ಟೀವಿಯಲ್ಲಿ ಹತ್ತು ಸೆಕೆಂಡ್ ಕಾಣಿಸಿಕೊಳ್ಳಬಹುದಾಗಿತ್ತು. ಆದರೆ ಇವತ್ತು ಅವರು ನೀವು ಕೊಡದಿದ್ದರೆ ಕತ್ತೆಬಾಲ ಜನರು ನಮಗೆ ಕೊಡುತ್ತಾರೆ ಎನ್ನುವಷ್ಟು ಶಕ್ತರಾಗಿದ್ದಾರೆ.

ಮುಖ್ಯಧಾರೆ ಹಾಸ್ಯ ಸಾಹಿತ್ಯಕ್ಕೆ ಸೋಡಾಚೀಟಿ ಕೊಟ್ಟದ್ದನ್ನು ಎದುರಿಸಲು ಅಪರಂಜಿ (ಅದರ ಬಳಗ) ಎರಡು ಮಾರ್ಗಗಳನ್ನು ಕಂಡುಕೊಂಡಿದೆ. ಒಂದು ಕಡೆ ಹಾಸ್ಯಾಸಕ್ತರ ಸಂಖ್ಯೆಯನ್ನು ಬೆಳೆಸಲು ವರ್ಷ ವರ್ಷ ಹಾಸ್ಯೋತ್ಸವಗಳನ್ನು ನಡೆಸುತ್ತಿದೆ. ಇನ್ನೊಂದು ಕಡೆ ತಿಂಗಳು ತಿಂಗಳು ಇದ್ದುದ್ದರಲ್ಲಿ ಅತ್ಯುತ್ತಮ ಹಾಸ್ಯ ಲೇಖನಗಳನ್ನು ಪ್ರಕಟಿಸುತ್ತಿದೆ. ಇದು ಅತ್ಯಂತ ಆರೋಗ್ಯಕರ ಪ್ರತಿಕ್ರಿಯೆ ಎಂದು ನನಗನ್ನಿಸುತ್ತದೆ.



ತೀರ ಕರ್ನಾಟಕಕ್ಕೆ ಹಾಕ್ಬಿಟ್ಟಿದ್ದಾರಲ್ಲಾ ಕೇಸ್ನಾ.
ಎಂಥ ಅನ್ಯಾಯ

# ಸ್ಟೋರಿ ಟೆಲ್ಲಿಂಗೂ... ರೈಟಿಂಗೂ...

- ಜಯಾಯಾಜಿ ಶಿರಾಲಿ

ಅಂದು ತಿಂಗಳಿನ ನೀಲನ ಬಿಲ್ಲು ತುಂಬಿ ಹಿಂತಿರುಗುವಾಗ ರಸ್ತೆಯಂಚಿನಲ್ಲಿದ್ದ ಕಮಲಮ್ಮನ ಮನೆಕಡೆ ದೃಷ್ಟಿಹಾಯಿಸಿದೆ. ಮೊರದ ತುಂಬ ಅವರೆಕಾಯಿ ಎದುರಿಗಿಟ್ಟುಕೊಂಡು ಸುಲಿಯುತ್ತಿದ್ದಳು ಆಕೆ. ಅಯ್ಯಪ್ಪ ಅವರೆಕಾಯಿ ಕಂಡರೆ ಮೈಲು ದೂರ ಹಾರುವ ನಾನು ಕಮಲಮ್ಮನ ಕಣ್ಣಿಗೆ ಬೀಳದೆ ಪಾರಾಗಲು ತುಸು ಬಿರಿಸಿನಲ್ಲಿ ಹೆಜ್ಜೆ ಹಾಕಿದೆ. ನನ್ನನ್ನು ಕಂಡರೆ ಖಂಡಿತ ಮನೆಗೆ ಕರೀತಾಳೆ... ಕರೆದಳಂತ ಹೋದ್ರೆ ಅವಳ ಜೊತೆ ನಾನೂ ಅವರೆಕಾಯಿಗೆ ಕೈ ಹಾಕಬೇಕಾಗುತ್ತೆ. ಅವ್ರೆಕಾಯಿ ಅಂದ್ರೆ ಮೈಯೆಲ್ಲಾ ಉರಿಯುತ್ತೆ ನನಗೆ. ಯಾವುದೋ ಜನ್ಮದಲ್ಲಿ ಅವ್ರೆಕಾಯಿ ಹೆಣ್ಣಿನ ಶತ್ರುವಾಗಿ ಹುಟ್ಟಿದ ರಾಕ್ಷಸನೆಂದೂ, ಆದಕ್ಕಾಗಿ ಈ ಕಲಿಯುಗದಲ್ಲಿ ಆ ರಾಕ್ಷಸ ಅವರೆಕಾಯಿಯ ಜನ್ಮ ಹೊತ್ತು ಹೆಣ್ಣನ್ನು ಕಾಡಿಸಲು, ಪೀಡಿಸಲು, ಆಕೆಯ ಅಮೂಲ್ಯ ವೇಳೆಯನ್ನು ಕೊಲ್ಲಲು ಬಂದಿದ್ದಾನೆ ಅಂತಲೇ ನನ್ನ ಅಭಿಪ್ರಾಯ. ನನ್ನ ಮನೆಯ ಹೊಸಿಲೊಳಗೆ ಅವ್ರೆಕಾಯಿಗೆ ಪ್ರವೇಶವಿಲ್ಲದಂತೆ ಮಾಡಿ ನಾನೇನೋ ವಿಜಯ ಗಳಿಸಿರುವೆ. ಆದರೆ ಇತರ ಹೆಂಗಸರು... ಚೂರೂ ಬೇಜಾರಿಲ್ಲದೆ ಬುಟ್ಟಿ ತುಂಬಾ ಅವ್ರೆಕಾಯಿಯನ್ನು ಎದುರಿಗಿಟ್ಟುಕೊಂಡು ಮಿಡುಕಾಡುವ ಹುಳವಿದ್ದರೆ ಅದರೊಂದಿಗೆ ಸರ್ಕಸ್ ಮಾಡಿ ಸಂಯಮದಿಂದ ಸುಲಿಯುತ್ತಾರಲ್ಲಾ..... ಅವ್ರೆಕಾಯಿ ಸುಲಿದು ತಮ್ಮ ಅಮೂಲ್ಯ ವೇಳೆ ಹಾಳಾದ ದುಃಖವನ್ನೂ ಮರೆತು... ಅವ್ರೆಕಾಯಿಯ ಹುಳಿಯುಂಡ ಪತಿ ದೇವರ ಮುಖದಲ್ಲಿ ಮೂಡುವ ಸಂತೃಪ್ತಿ ಕಂಡ ಹಿಗ್ಗುತ್ತಾರಲ್ಲಾ ... ಛೇ, ಇದೇ ನನಗಾಗುವದಿಲ್ಲ. ಹುಳಿ ಊಟಮಾಡುವ ಗಂಡಸರ ಹತ್ತಿರವೂ ಸ್ವಲ್ಪವಾದರೂ ಅವ್ರೆಕಾಯಿ ಸುಲಿಸುಕೊಳ್ಳಬಾರದೆ ಈ ಹೆಂಗಸರು...? ಉಹೂಂ, ಹಾಗೆ ಮಾಡರು ಈ ಹೆಂಗಸ್ರು.

''ರೀ ಬನ್ರಿ'' ಕಮಲಮ್ಮ ಕಂಡೇ ಬಿಟ್ಟಳು. ''ಈಗ ಬರೊಲ್ಲಾರಿ ಇನ್ನೊಂದು ದಿನ ಬರ್ತೀನಿ. ಸ್ವಲ್ಪ ಅರ್ಜೆಂಟ್ ಕೆಲಸ ಇದೆ'' ಜಾರಿಕೊಳ್ಳಲು ಪ್ರಯತ್ನಿಸಿದೆ.

''ಕೆಲ್ಸ ಏನ್ರಿ ಎಲ್ರಿಗೂ ಇರುತ್ತೆ, ಬನ್ನಿ ಕುಂಕುಮ ಇಟ್ಕೊಂಡು ಹೋಗಿ'' ಎಂದಳು ಕಮಲಮ್ಮ, ಈ ಕಡೆಯವರ ರಾಮಬಾಣ ಇದು. ಕುಂಕುಮಕ್ಕೆ ಅಂತ ಕರೆದರೆ ಹೋಗ್ದೆ ಇರ್ಲಿಕ್ಕೆ ಆಗುತ್ತಾ....' ಹೋದೆ ಕುಳಿತೆ. ಸದ್ಯ ಆಕೆನೇ ಅವರೆಕಾಯಿ ಮೊರವನ್ನು ದೂರವಿಟ್ಟಳು. ಮನದಲ್ಲಿಯೇ ಧನ್ಯವಾದ ಅರ್ಪಿಸಿದೆ. ''ರೀ ನಿಮ್ಗೆ ಸ್ಟೋರಿ ಪ್ರೈಜ್ ಬಂತಂತೆ'' ನೇರವಾಗಿ ಕೇಳಿಬಿಟ್ಟಳು ಕಮಲಮ್ಮ. ನಿಜಕ್ಕ ನಾನು ಕಕ್ಕಾಬಿಕ್ಕಿ!! ಓ ದೇವ್ರೆ ಈ ಕಮಲಮ್ಮನಿಗೆ ಯಾರು ಹೇಳಿದ್ರು ಈ ವಿಷಯಾನಾ....

ಆಗಾಗ ಏನಾದರೂ ಬರೆಯಬೇಕೆಂದು ಅನಿಸಿದಾಗ ನಾನು ಬರೆಯುದುಂಟು. ಪತ್ರಿಕೆಗಳಿಗೆ ಕಳಿಸುವುದೂ ಉಂಟು. ಆದರೆ ಪತ್ರಿಕೆಯಲ್ಲಿ ಪ್ರಕಟವಾದರೆ ಮಾತ್ರ,

ಊರಿಗೆ ಬಂದ ನಂತರ ಆಚೆ ಈಚೆ ಮನೆಯ ಜನರಿಗೂ ಹೇಳಿದ್ದು ಇಲ್ಲ ಯಾಕೆ ಗೊತ್ತೆ?... ಅದೊಂದು ಕಥೆ. ನಾವು ಈ ಹಿಂದಿನ ಊರಲ್ಲಿ ಇದ್ದಾಗ ನನ್ನ ಕಥೆಯೊಂದು ಹೊಸದಾಗಿ ರಾಜ್ಯಮಟ್ಟದ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನನಗೆ ನಾನೇ ಸಂತೋಷ ತಡಿಲಾರ್ದೆ ಪಕ್ಕದ ಮನೆಯವಳಿಗೆ ತೋರಿಸಿದ್ದೆ. ಆ ಪುಣ್ಯಾತಗಿತ್ತಿ ಪತ್ರಿಕೆ ತೆಗೆದು ಕಥೆ ಬಿಡಿಸಿದ ಚಿತ್ರ ನೋಡಿ ''ಅಲ್ರಿ, ನೀವು ಇಷ್ಟು ಚೆನ್ನಾಗಿ ಚಿತ್ರ ಬರೀತಿರಂತ ತಿಳಿದೇ ಇರ್ಲಿಲ್ಲ'' ಅಂದಿದ್ದಳು. ಇನ್ನೊಬ್ಬಳು ನಿಮ್ಮ ಸ್ವಂತ ಅನುಭವ ಕಥೆನಾ ಇದು ಎಂದು ಕೇಳಿದ್ದಳು. ''ಅಲ್ಲ, ಇವೆಲ್ಲ ಕಾಲ್ಪನಿಕ ನೂರಕ್ಕೆ ಹತ್ತು ಭಾಗ ಎಲ್ಲೊ ಕೇಳಿದ್ದು... ನೋಡಿದ್ದು. ಅದಕ್ಕಿಷ್ಟು ಕಲ್ಪನೆಯ ರೆಕ್ಕೆ ಜೋಡಿಸುವುದು'' ಎಂದು ಹೇಳಿದಾಗ ಆಕೆ ನಂಬಲೇ ಇಲ್ಲ. ಮತ್ತೊಬ್ಬಳು - ''ರೀ ನೀವು ಹೇಗೆ ಬರೀತಿರಾ ಅಂತ ನನಗೂ ಹೇಳಿಕೊಡಿ. ಎಷ್ಟು ಬೇಗಾದ್ರೂ ಟ್ಯೂಶನ್ ಫೀಸು ಕೊಡ್ತೀನಿ. ನಾನೂ ಕಥೆ ಬರಿತೀನಿ...'' ಟ್ಯೂಶನ್ ಕಾಗದ ಪೆನ್ನು ಹಿಡಿದು ನಮ್ಮ ಮನೆಗೇ ಬಂದು ಆ ದಿನವಿಡೀ ಠಿಕಾಣಿ ಹೂಡಿ ನನ್ನ ವೇಳೆಯನ್ನು ತಿಂದಿದ್ದಳು. ''ಇವೆಲ್ಲ ಹೇಳಿಕೊಟ್ಟು ಬರುವಂತಹದಲ್ಲ. ನೀವಾಗಿ ನೀವೇ ಬರೀಬೇಕು. ನಿಮ್ಮಲ್ಲಿಯೇ ಸಾಹಿತ್ಯದ ಒರತೆ ಹುಟ್ಟಬೇಕು ಸುತ್ತಲಿನ ಪರಿಸರಕ್ಕೆ ನಿಮ್ಮ ಮನ ಸ್ಪಂದಿಸಬೇಕು. ಆಗ ತನ್ನಿಂದ ತಾನೆ ನಿಮ್ಮಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತದೆ....'' ನಾನು ಭಾಷಣ ಕೊರೆದಿದ್ದಷ್ಟೆ ಬಂತು. ಆಕೆ ಬಾಯ್ಬಿಟ್ಟು ಕೇಳಿದ್ದಷ್ಟೆ ಬಂತು... ಅವಳು ಮಾತ್ರ ಸುತ್ತಲ ವಠಾರಕ್ಕೆ ಅವ್ಳಿಗೆ ಭಾರೀ ಜಂಬ ಕಣ್ರಿ. ಏನೋ ಕಥೆ ಬರೀತಾಳೆ ಅಂತ ನಂಗೂ ಒಂದ್ನಾಲ್ಕ ಕಥೆ ಹೇಳಿಕೊಡಿ ಬರೆದು ಪತ್ರಿಕೆಗೆ ಕಳಿಸ್ತೀನಿ ಅಂತ ಕೇಳಿದ್ರೆ ಆಕೆ ಹೇಳಿಕೊಡ್ಲೇ ಇಲ್ಲ....'' ಎಂದು ಟಾಂ ಟಾಂ ಮಾಡಿಬಿಟ್ಟಳು. ಕಸೂತಿ, ಹೊಲಿಗೆ, ಸ್ವೆಟರ್ ಎಂಬೋಸಿಂಗ್, ಪೇಂಟಿಂಗ್ ಮೊದಲಾದವುಗಳನ್ನು ಫೀಸು ಕೊಟ್ಟು ಕಲಿತ ಹಾಗೆ ಕಥೆ ಕವನ ಬರೆಯೋದನ್ನು ಕಲಿಯಬಹುದು ಅಂತ ಆಕೆ ತಿಳಿದಿದ್ದಳು ಪಾಪ.

ಇದೆಲ್ಲ ಗೊಡವೆ ಬೇಡವೆಂತ ವರ್ಗವಾಗಿ ಬಂದ ಹೊಸ ಊರಲ್ಲಿ ನನ್ನ ಬರವಣಿಗೆ ಕುರಿತು ನಾನು ಯಾರಲ್ಲೂ ಚಿಟ್ಟೆನ್ನಲಿಲ್ಲ. ಹೀಗಿರುವಾಗ ನನ್ನ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದ ವಿಷಯ ಈ ಕಮಲಮ್ಮನಿಗೆ ಹೇಗೆ ಗೊತ್ತಾಯ್ತು...


ಯೋಚಿಸುತ್ತಿದ್ದಾಗಲೆ ಒಳಗಿನಿಂದ ಎರಡು ಕ್ಯಾರೆಟ್ ಹಲ್ವಾವನ್ನು ಪ್ಲೇಟಿನಲ್ಲಿಟ್ಟು ತಂದು ಎದುರಿಗಿಟ್ಟಳು ಕಮಲಮ್ಮ.

''ನನ್ಗೆ ಪ್ರೈಜ್ ಬಂದ ವಿಷಯ ನಿಮ್ಗೆ ಹೇಗೆ ಗೊತ್ತಾಯ್ತು'' ಕಮಲಮ್ಮನನ್ನೇ ಕೇಳ್ದೆ. ''ಮೊನ್ನೆ ಪೋಸ್ಟ್‌ಮನ್ ರವೆ ಉಂಡೆ ತಿನ್ತಾ ಬಂದಿದ್ದ. ಯಾರು ಕೊಟ್ಟರೋ ರವಾ ಉಂಡೆ? ಅಂತ ಕೇಳ್ದೆ. ಅದಕ್ಕವನು ಕೊನೆ ಮನೆಲಿದ್ದಾರಲ್ಲಾ ಆ ಅಮ್ಮಂಗೆ ಸ್ಟೋರಿಲಿ ಫಸ್ಟ್ ಪ್ರೈಜ್ ಬಂತಂತೆ. ಅದಕ್ಕೇ 'ಸಿಹಿ ಸುದ್ದಿ ತಂದ್ಕೊಟ್ಟಿದ್ದಿಯಾ ಸಿಹಿ ತಿನ್ನು' ಅಂತ ರವಾ ಉಂಡೆ ಕೊಟ್ರು ಎಂದ...'' ಕಮಲಮ್ಮ ಹೇಳಿದಾಗ ನಾನು ''ಹೂ ಕಣ್ರಿ. ಸ್ಟೋರಿಲಿ ಫಸ್ಟ್ ಪ್ರೈಜ್ ಬಂದಿದೆ'' ಎಂದೆ.

ಕಮಲಮ್ಮ ತಟ್ಟನೆ ಕೇಳಿದಳು ''ಸ್ಟೋರಿಲಿ ಟೆಲ್ಲಿಂಗೋ... ರೈಟಿಂಗೋ... ಯಾವುದರಲ್ಲಿ ಪ್ರೈಜ್?'' ಉತ್ತರ ಕೊಡಲು ತಡವರಿಸಿದೆ. ಏನಿದರ ಅರ್ಥ...? ಸ್ಟೋರಿ ಟೆಲ್ಲಿಂಗೋ ರೈಟಿಂಗೋ... ಅಂದರೆ...? ಗೀತಕ್ಕನ ಮಗಳು, ಕಾನ್ವೆಂಟಿಗೆ ಹೋಗುತ್ತಿದ್ದ ಮೀನಾಪುಟ್ಟಿ ಆಗಾಗ ಸ್ಕೂಲಿಗೆ ಹೋಗುವಾಗ 'ಸ್ಟೋರಿ ಟೆಲ್ಲಿಂಗ್ ಟೆಸ್ಟ್' ಉಂಟು ಅಂತಲೋ ಸ್ಟೋರಿ ರೈಟಿಂಗ್ ಟೆಸ್ಟ್ ಉಂಟು ಅಂತಲೋ ಹೇಳುತ್ತಿದ್ದ ನೆನಪಾಯ್ತು ''ಸ್ಟೋರಿ ರೈಟಿಂಗ್‌ದಲ್ಲಿ...'' ಎಂದುಬಿಟ್ಟೆ.

ಪ್ಲೇಟಿನಲ್ಲಿದ್ದ ಹಲ್ವಾ ಕೈಗೆತ್ತಿಕೊಳ್ಳುತ್ತಾ ಮಾತು ಬದಲಾಯಿಸಿದ. ''ಇದೇನು ಹಲ್ವಾ... ಸ್ಪೆಶಲ್?'' ಕೇಳಿದೆ. ಆದರೆ ಕಮಲಮ್ಮ ಮಾತ್ರ ಸ್ಟೋರಿ ಪ್ರೈಜ್ ವಿಷಯವನ್ನೆ ಗಟ್ಟಿ ಹಿಡ್ದು ಮುಂದುವರಿಸಿದಳು. ''ಓ ಸ್ಟೋರಿ ರೈಟಿಂಗೋ ರೈಟಿಂಗಾದ್ರೆ ಪ್ರೈಜ್ ಗಳಿಸೊದು ಸುಲಭ ಕಣ್ರಿ. ಯಾರ್ಬೇಕಾದ್ರು ಪ್ರೈಜ್ ಗಿಟ್ಟಿಸಹುದು. ನೆನಪು ಮಡಿಕೊಳ್ತಾ ನಿಧಾನವಾಗಿ ಹೇಗೋ ಬರ್ದು ಮುಗಿಸಬಹುದು. ಆದ್ರೆ ಸ್ಟೋರಿ ಟೆಲ್ಲಿಂಗು ಉಂಟು ನೋಡಿ, ಅದು ಮಾತ್ರ ಭಾರಿ ಕಷ್ಟಕಣ್ರಿ. ನಮ್ಮ ಎಲ್.ಕೆ.ಜಿ. ಪುಟ್ಟಿ ಮೊನ್ನೆ ಸ್ಕೂಲಲ್ಲಿ ಸ್ಟೋರಿ ಟೆಲ್ಲಿಂಗ್ ಸ್ಪರ್ಧೆಯಲ್ಲಿ ಫಸ್ಟ್ ಬಂದಿದ್ದಾಳೆ ಕಣ್ರಿ. ಅದಕ್ಕೇ ಸಿಹಿ ಕೊಡೋಣ ಅಂತ ನಿಮ್ಮನ್ನ ಕರ್ದೆ....'' ಎಂದಾಗ ಹಲ್ವಾ ತಿಂದು ಹಲ್ಲು ಗಿಂಜಿ ನಕ್ಕು ಮನೆಗೆ ಬಂದೆ ಮತ್ತು ಪೋಸ್ಟ್‌ಮನ್‌ನಿಗೆ ಅಷ್ಟು ಎಂತಾ ಸಿಹಿ ಸುದ್ದಿ ತಂದ್ರು.. ಬೇಕಾದ್ರೆ ಅದು ನೊಬೆಲ್ ಪ್ರಶಸ್ತಿನೇ ಆಗಿರ್ಲಿ.... ಅವನಿಗೆ ಮಾತ್ರ ಸಿಹಿ ಕೊಡ್ಲೇ ಬಾರ್ದು ಅಂತ ಅಂದೇ ನಿಶ್ಚಯ ಮಾಡಿಬಿಟ್ಟೆ.

★★★




ಮೂವತ್ಸಾವಿರಾ ಕೊಟ್ಟು ಕಂಪ್ಯೂಟರ್ ಕೊಂಡು ಅದರಲ್ಲಿ ಮಕ್ಕಳ ಆಟ
ಆಡೋ ಮೂರ್ಖತನಾನ ಯಾವ ಡಾಲ್ಫಿನ್ನೂ ಇದುವರೆಗೂ ಮಾಡಿಲ್ಲ
ಆದರಿಂದಾನೇ ತಿಳಿಯುತ್ತೆ ನಾವು ಮನುಷ್ಯರಿಗಿಂತಾ ಬುದ್ಧಿವಂತ್ರೂ ಅಂತ

## ಹಾಸ್ಯಬ್ರಹ್ಮ ಟ್ರಸ್ಟ್ ಮತ್ತು ಕೊರವಂಜಿ ಅಪರಂಜಿ ಟ್ರಸ್ಟ್

ಸಾದರಪಡಿಸುವ

# ಹಾಸ್ಯೋತ್ಸವ 2K3

**ವೈ.ಎನ್.ಕೆ. – ಟೀಯೆಸ್ಸಾರ್ ಸಂಸ್ಮರಣೆ**

ಗುರುವಾರ 25-12-2003 ಜಯನಗರದ ಹೆಚ್.ಎನ್. ಕಲಾಕ್ಷೇತ್ರದಲ್ಲಿ
ಬೆಳಗ್ಗೆ 10.30ರಿಂದ

ಉದ್ಘಾಟನೆ - ಶ್ರೀ ಜಿ.ವಿ. ಅಯ್ಯರ್
ಖ್ಯಾತ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು

ಟೀಯೆಸ್ಸಾರ್ ಸ್ಮರಣೆ - ಶ್ರೀ ಬಿ.ವಿ. ವೈಕುಂಠರಾಜು
ಖ್ಯಾತ ಪತ್ರಿಕೋದ್ಯಮಿ

ವೈ.ಎನ್.ಕೆ. ಸ್ಮರಣೆ - ಶ್ರೀ ವಿಶ್ವೇಶ್ವರ ಭಟ್
ಕಾರ್ಯ ನಿರ್ವಾಹಕ ವ್ಯವಸ್ಥಾಪಕರು, ವಿಜಯ ಕರ್ನಾಟಕ

ಹಲವು ಹಾಸ್ಯ ಪುಸ್ತಕಗಳ ಬಿಡುಗಡೆ

ಹಾಸ್ಯಲಹರಿ - ಶ್ರೀ ರಿಚರ್ಡ್ ಲೂಯಿಸ್
ಶ್ರೀ ಆರ್.ಕೆ. ಪದ್ಮನಾಭನ್
ಶ್ರೀ ವೈ.ವಿ. ಗುಂಡೂರಾವ್
ಶ್ರೀ ದಯಾನಂದ್

ಉಸ್ತುವಾರಿ - ಪ್ರೊ. ಅ.ರಾ. ಮಿತ್ರ
ಹಾಸ್ಯ ರಂಜನೆ - ಗಾನ ವಿನೋದಿನಿ
ಎಲ್ಲರಿಗೂ ಆದರದ ಸ್ವಾಗತ

ಸಂಚಾಲಕರು: ಕೃಷ್ಣ ಸುಬ್ಬರಾವ್ 3232849 ಬೇಲೂರು ರಾಮಮೂರ್ತಿ 3360284

# F.I.I

– ನಾಚಿ

ಭಾನುವಾರವಾಗಿತ್ತು. ಬೆಳಿಗ್ಗೆ ೯ರ ಸಮಯ. ಕುಂಟಪ್ಪನ ಪನ್ಸಾರಿ ಅಂಗಡಿಯಲ್ಲಿ ಮನೆಯಲ್ಲಿ ಹೇಳಿದ್ದ ಸಾಮಾನು ಕೊಂಡು, ಅವನ ಜತೆ ಹರಟುತ್ತಾ ನಿಂತಿದ್ದೆ. ಆಗ ಸ್ಕೂಟರಿನಲ್ಲಿ ಒಬ್ಬರು ಬಂದು ಕುಂಟಪ್ಪನನ್ನು ಕೇಳಿದರು.

''ನಿಮ್ಮ ಹತ್ತಿರ ಇದು ಇದೆಯೇ?'' ಅಂತ

''ಇದೆ'' ಅಂತ ನಗುತ್ತಾಕುಂಟಪ್ಪ

''ಆ ಇದುಸಾರ್... ಇದು...'' ಅಂತ ಮತ್ತೆ ಅಂದರು.

''ಇದೆ ಅಂದೆನಲ್ಲಾ'' ಅಂತ ಕುಂಟಪ್ಪ ಮತ್ತೆ ನಕ್ಕ.

''ತಮಾಷೆ ಮಾಡಬೇಡಿ ಸಾರ್ ಮನೇಲಿ ಯಾವುದನ್ನೊ ತೊಗೊಂಡು ಬಾ ಅಂತ ಹೇಳಿದ್ದರು. ಹಾಳಾದ್ದು ಅದು ಯಾವುದು ಅನ್ನೋದು ಮರೆತು ಹೋಗಿದೆ. ಸರಿ, ಇನ್ನೇನು ಮನೆಗೆ ಮತ್ತೆ ಹೋಗಿ, ಕೇಳಿಕೊಂಡು ಬರ್ತೀನಿ'' ಅಂದು, ಸ್ಕೂಟರಿನಲ್ಲಿ ಹೊರಡಲು ಅನುವಾದರು.

''ಸ್ವಲ್ಪ ತಡೀರಿ ಸಾರ್... ನಿಮ್ಮ ಮನೇಲಿ ಯಾರಾದರೂ ಬಾಣಂತಿ ಇದ್ದಾರೆಯೇ?'' ಅಂತ ಕೇಳಿದ ಕುಂಟಪ್ಪ.

''ಹ್ಞೂ... ಸಾರ್, ಅದಕ್ಕೇ ಏನೋ ತೊಗೊಂಡು ಬಾ ಅಂದಿದ್ದರು'' ಆದರು ಆತ.

''ಪಿಪ್ಲಿನೇ?'' ಅಂತ ಕೇಳಿದ ಕುಂಟಪ್ಪ.

''ಹ್ಞಾ! ಹೌದು ಸಾರ್, ಪಿಪ್ಲೀನೇ'' ಅಂದರು,

''ನಾನು ನಿಮಗೆ ಮೊದಲೇ ಹೇಳಲಿಲ್ಲವೇ ಇದೆ ಅಂತ'' ಅಂದು, ಕುಂಟಪ್ಪ ಪಿಪ್ಲಿನ ಕಟ್ಟಿಕೊಟ್ಟ.

ಹೀಗೆ, ಏನಾದರೂ ಮರೆತಾಗ ''ಇದು'' ನಮ್ಮ ಸಹಾಯಕ್ಕೆ ಬರತ್ತೆ, ಮುದುಕರಾದ ಮೇಲಂತೂ ಕೇಳಲೇ ಬೇಡಿ. ಪೂರ್ತಿ ''ಇದ''ರಲ್ಲೇ ಸಂಭಾಷಣೆ.

''ಲೇ! ನನ್ನ ಇದು ನೋಡಿದ್ಯಾ?'' ಅಂತ ಗಂಡ

''ಯಾವುದ್ರೀ?'' - ಆಕೆ

''ಅದೇ... ನನ್ನ ಇದು?'' - ಆತ

''ಇದು ಅಂದ್ರೆ, ಯಾವುದು ಸರಿಯಾಗಿ ಹೇಳಿ'' - ಆಕೆ.

''ನನ್ನ ಇದುಕಣೇ... ಆ ಹ್ಞಾ! ನನ್ನ ಕನ್ನಡಕ ನೋಡಿದ್ಯಾ ಅಂದೆ'' - ಆತ.

''ಹಾಗ್ಹೇಳಿ. ಹಾಲಿನಲ್ಲೇ ಇದೆಯಲ್ರೀ ಕಣ್ಣೆದುರಿಗೇ'' - ಆಕೆ

''ಅಯ್ಯೋ ಹೌದೇ! ಹಾಲಿನಲ್ಲಿ ಎಲ್ಲಿ?''

''ಆ ಇದರ ಮೇಲೇ ಇದೆಯಲ್ರೀ''

''ಯಾವ ಇದರ ಮೇಲೇ? ಸರಿಯಾಗಿ ಹೇಳ್ಬಾರದೇ''


''ಆ ಇದರ ಮೇಲೇರೀ.. ಆ... ಹ್ಞಾ! ಟೀವೀ ಮೇಲೇ ಇದೆಯೆಲ್ಲಾ''

''ಓ ಹಾಗ್ಹೇಳು'' .... ಹೀಗೆ ಸಂಭಾಷಣೆ ನಡೀತಿರತ್ತೆ.

ನಮ್ಮ ಸುಂದರ ಚಿಕ್ಕಮ್ಮಂಗೂ ಅಷ್ಟೆ. ವಯಸ್ಸಾಗಿದೆ. ''ಇದು'' ಇಲ್ದೇ ಮಾತೇ ಇಲ್ಲ. ''ಇದೇ'' ಅದಕು, ಇದಕು, ಎದುಕು ಅಂತ. ಮೊನ್ನೆ, ಅವರು ದಾರಿಲಿ ಸಿಕ್ಕಿದ್ದಾಗ, ಬಾಣಂತಿ ಲೇಹ ಹೇಗೆ ಮಾಡೋದು ಅಂತ ನನ್ನ ಹೆಂಡತಿಗೆ ಹೇಳಿದರು, ಮಧ್ಯೆ ಒಂದೆರಡು ಸಲ ಜೀರಿಗೆ, ತುಪ್ಪ ಅನ್ನೋದು ಬಿಟ್ಟರೆ, ಪೂರ್ತಿ ''ಇದ''ರಲ್ಲೇ ಹೇಳಿದರು. ನನ್ನಾಕೆಗೇನೋ ಅರ್ಥವಾಯ್ತು. ಪೂರ್ತಿ ಹೇಳಿ ಮುಂದಕ್ಕೆಹೋಗಿದ್ದವರು, ವಾಪಸ್ ಬಂದು ''ಒಂದು ವಿಷಯ ಜ್ಞಾಪಕ ಇಟ್ಟುಕೋ, ಕೊನೇಲಿ ಇದನ್ನ ಹಾಕೋದು ಮಾತ್ರ ಮರೀಬೇಡ'' ಅಂತ ಹೇಳಿ ಹೋದರು.

''ಇದ''ರ ಬಗ್ಗೆ ಮತಾಡುತ್ತಿದ್ದಾಗ ನನ್ನ ಸ್ನೇಹಿತರು ದ್ವಾರಕಾನಾಥ್ (ಇವರು ಕೊರವಂಜಿ ರಾ.ಶಿ.ಯವರ ಸಂಬಂಧಿ)ರವರು ಒಂದು ಉತ್ತಮ ಸಲಹೆ ಕೊಟ್ಟರು. ''ಇದ''ರ ಬಗ್ಗೆ ಸಂಶೋಧನೆಯೇ ಮಾಡಬಹುದು. ಅದಕ್ಕಾಗಿಯೇ ಒಂದು ಅಧ್ಯಯನ ಸಂಸ್ಥೆಯ ಅವಶ್ಯಕತೆ ಇದೆ. ''ಇದು ಅಧ್ಯಯನ ಸಂಸ್ಥೆ'' (Institute of Idu studies) ಎಂದು ಕರೆಯಬಹುದು. ಈ ಸಂಸ್ಥೆಯವರು ಯಾರು ''ಇದ''ರ ಪ್ರಯೋಗದಲ್ಲಿ ನಿಷ್ಣಾತರಾಗಿರುತ್ತಾರೋ ಅವರನ್ನು ಗುರುತಿಸಿ, ಅವರಿಗೆ ಫೆಲೋಷಿಪ್ ಕೊಡಬಹುದು. Fellow of the Institute of Idu (F.I.I) ಅಂತ. ಇತರ ಭಾಷೆಗಳಲ್ಲೂ ''ಇದು'' ಇದೆಯೇ? ಆದರ ವ್ಯಾಪ್ತಿ ಬಗ್ಗೆ ಯಾರು ಆಳವಾದ ಅಧ್ಯಯನ ಮಾಡಿ, ಮಹಾತ್ಮ ಬಂಧವನ್ನು ಮಂಡಿಸುತ್ತಾರೊ, ಅವರಿಗೆ Ph.D in Idu ಡಿಗ್ರಿಯನ್ನೂ ಕೊಡಬಹುದು. ಹೇಗಿದೆ ಈ ಸಲಹೆ?

''ಇದ''ರ ವಿಷಯ ಇನ್ನೇನಿಲ್ಲ. ಇಲ್ಲಿಗೇ ಇದು ಮಾಡೊದು ಒಳ್ಳೇದು.



ಯೋಗ ಗೀಗ ಎಲ್ಲಾ ಟ್ರೈ ಮಾಡ್ದೇರೀ. ಕೊನೇಗೆ ವಾಕಿಂಗೇ ಬೆಸ್ಟು ಅಂತ ನಿರ್ಧರಿಸ್ದೆ

# ಹಿಟ್ಲರ್ ಹುಟ್ಟು ಹಬ್ಬ

– ಬಿ.ಆರ್. ನಾಗೇಶ್

ದೇಶಪ್ರೇಮ ವಿಶ್ವಪ್ರೇಮವಾಗಿ ರೂಪಾಂತರಗೊಂಡ ಪ್ರಯುಕ್ತ, ಮಂಡೇಲರ ಹುಟ್ಟು ಹಬ್ಬದ ದಿನ ಊರಿನ ಹಲವು ಹಿರಿಯ ನಾಗರಿಕರಿಗೆ ಧರ್ಮಾರ್ಥ ಕ್ಷೌರ ಮಾಡಿದ್ದನ್ನು ಕಂಡು, ಆ ಗೆಳೆಯರ ಗುಂಪಿಗೆ ತಾವೂ ದೇಶಸೇವೆ ಮಾಡಲೇಬೇಕೆಂಬ ಉತ್ಸಾಹ ಹುಟ್ಟಿದ್ದು ಸ್ವಾಭಾವಿಕವಾಗಿತ್ತು. ಈ ಹಿಂದೆ ಅವರು ಬೇರೆ ಬೇರೆ ರೀತಿಗಳಲ್ಲಿ ದೇಶ ಸೇವೆ ಮಾಡಿದ್ದು ಎಂದಿತ್ತು: ತಮ್ಮ ವಠಾರದ ತೋಡನ್ನು ಶುಚಿ ಮಾಡಿದ್ದು, ತಮ್ಮ ವಠಾರದಲ್ಲಿ ಹೆಚ್ಚಾದ ನಾಯಿ ಸಂತಾನವನ್ನು ನಿಯಂತ್ರಣಗೊಳಿಸಿದ್ದು, ರಾಜಕಾರಣಿಗಳು ವನಮಹೋತ್ಸವದ ದಿನ ನೆಟ್ಟ ಗಿಡಗಳನ್ನು ಮರುದಿನವೇ ಕಿತ್ತು ಎಸೆದದ್ದು, ಶಾಲೆಗಳಲ್ಲಿ ಡೊನೇಶನ್ ಹಾವಳಿ ನಿಲ್ಲಿಸಲೆಂದು ಬರಿಯ ಉಪ್ಪಿಟ್ಟು ಮಾತ್ರತಿಂದು ಅಮರಣ ಉಪವಾಸ ಕೂತದ್ದು, ಇದಕ್ಕಾಗಿ ಪೋಲಿಸರಿಂದ ಪೆಟ್ಟು ತಿಂದದ್ದು, ಕಳ್ಳತನ ಹೆಚ್ಚಾಗಿ ಸಂಭವಿಸುವ ವಾರ್ಡಿನಲ್ಲಿ ರಾತ್ರಿ ಹೊತ್ತು ವಿಝಿಲ್ ಊದುತ್ತಾ ನಾಯಿಗಳಿಗೂ ನಿದ್ರೆಮಾಡಲು ಬಿಡದೆ, ಮನುಷ್ಯರಿಗು ನಿದ್ದೆ ಮಾಡಲು ಬಿಡದೆ ಗಸ್ತು ತಿರುಗಿ ಹೊಯ್‌ಸಳದ ಕೈಗೆ ಸಿಕ್ಕಿಬಿದ್ದದ್ದು - ಇತ್ಯಾದಿ. ಆದರೆ ಯಾವ ದೇಶಭಕ್ತಿ ಕಾರ್ಯಕ್ರಮಗಳು ಅವರಿಗೆ ಪತ್ರಿಕೆಗಳಲ್ಲಿ ಪ್ರಚಾರ ಕೊಡಲಿಲ್ಲ - ಅವರ ಫೋಟೋ ದಿನಪತ್ರಿಕೆಯಲ್ಲಿ ಪ್ರಕಟಗೊಳ್ಳಲಿಲ್ಲ. ದಿನಪತ್ರಿಕೆಯಲ್ಲಿ ಫೋಟೋ ಸಹಿತ ಪ್ರಕಟವಾಗದಿದ್ದರೆ, ಯಾವ ಕಾರ್ಯವೇ ಆಗಲಿ, ಅದು ಶುದ್ಧ ದೇಶಭಕ್ತಿ ಆಗುವುದಿಲ್ಲ - ಎಂಬ ಇವರ ತೀರ್ಮಾನ ಸರಿಯಾದದ್ದೆ ಆಗಿತ್ತು.

ಇದಕ್ಕಾಗಿ ಕಾಲ ಕಾಯುತ್ತಿದ್ದಾಗ ಮಂಡೇಲ ಕ್ಷೌರ ಸಂಭವಿಸಿತು. ಇದನ್ನ ಟಿ.ವಿ.ಯಲ್ಲಿ ಕಂಡ ಗೆಳೆಯರಿಗೆ, ತಮ್ಮ ದೇಶಭಕ್ತಿ ದಿನಪತ್ರಿಕೆಗಳಲ್ಲಿ ತಮ್ಮ ಫೋಟೋ ಸಹಿತ ಪ್ರಕಟವಾಗಬಲ್ಲ ಒಂದು ಯೋಚನೆ ಹೊಳೆಯಿತು: ಅದುವೆ ಹಿಟ್ಲರನ ಹುಟ್ಟು ಹಬ್ಬ ಆಚರಣೆ - ಇದರ ಅಂಗವಾಗಿ ಧರ್ಮಾರ್ಥ ಮೀಸೆ ಬೋಳಿಸುವ ಕಾರ್ಯಕ್ರಮ.

ಆರು ಮಿಲಿಯನ ಯಹೂದಿಗಳನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲಿಸಿದ ಹಿಟ್ಲರ್‌ಗಿಂತ ಉತ್ತಮ ಆದರ್ಶವ್ಯಕ್ತಿ ಯುವ ಪೀಳಿಗೆಗೆ ಎದುರಾದದ್ದಾದರೂ ಹೇಗೆ? ಇದಕ್ಕೆ ಕಾರಣ ಹಿಟ್ಲರನ ಮಹತ್ವಾಕಾಂಕ್ಷೆ ಅಲ್ಲ, ಅವನ ಯಹೂದಿ ದ್ವೇಷವು ಅಲ್ಲ: ಅವನ ಮೀಸೆ. ಅದು ತನಕ ಯವ ದೇಶದಲ್ಲಾದರೂ ಆ ಬಗೆಯ ಮೀಸೆ ಇದ್ದ ಸರ್ವಾಧಿಕಾರಿ ಬಂದೇ ಇರಲಿಲ್ಲ. ಹಾಗಾಗಿ ಆ ಮೀಸೆಯಿಂದಾಗಿ ಆತ ಜಗತ್‌ಪ್ರಸಿದ್ಧನಾದ. ಆ ಪ್ರಸಿದ್ಧಿಯಲ್ಲಿ ಚಾಪ್ಲಿನ್‌ಗೂ ಪಾಲು ಇದೆ-ಎಂದು ತಿಳಿದು ಯುವಕರು ಅವನನ್ನು ಆರಿಸಿದ್ದು - ಸರ್ವಾಧಿಕಾರದ ವಿರುದ್ಧದ ಧರ್ಮಯುದ್ಧ ಸಾರಿದ್ದು. ಅವನ ವಿಚಾರ ಹೆಚ್ಚೇನನ್ನು ತಿಳಿಯದೆ ಇದ್ದ ಗೆಳೆಯರ ಬಳಗ ಅದಾಗಿತ್ತು - ಎಂಬುದರಲ್ಲಿ ಸಂಶಯವಿರಲಿಲ್ಲ.

ಹುಟ್ಟು ಹಬ್ಬದ ಆಚರಣೆಗಾಗಿ ಸ್ವಲ್ಪ ಪೂರ್ಣ ತಯಾರಿ ಬೇಕಿತ್ತು. ಒಳ್ಳೆ ಒಳ್ಳೆಯ ರಾಜಕಾರಣಿ, ಅದೂ ಮೀಸೆ ಇದ್ದವ, ಉದ್ಘಾಟನೆಗೆ ಬೇಕಿತ್ತು. ಗೆಳೆಯರೇ ಮೀಸೆ ಬೋಳಿಸುವ ಕೆಲಸ ಮಾಡಬೇಕು. ಆದರೆ ಸೇಫ್ಟಿರೇಜರನ್ನು ಉಪಯೋಗಿಸಿ ಅಲ್ಲ - ಕ್ಷೌರ ಕತ್ತಿಯನ್ನು ಉಪಯೋಗಿಸಿ. ಕಾರಣ ಟಿ.ವಿ.ಯಲ್ಲಿ ಕ್ಷೌರಕತ್ತಿ ಎದ್ದು ಕಾಣುತ್ತದೆ. ಸೇಫ್ಟಿರೇಜರ್‌ಗೆ ಆಡೌಲು ಇಲ್ಲ. ಗೆಳೆಯರಲ್ಲಿ ಒಬ್ಬರು ಕ್ಷೌರ ಕತ್ತಿಯನ್ನು ಬಳಸುವುದನ್ನು ಕಲಿತುಕೊಳ್ಳಬೇಕಾಯಿತು. ಉಳಿದಂತೆ ಸಮಾರಂಭಕ್ಕೆ ಒಂದು ಸ್ಥಳ ನಿರ್ಣಯ - ಅದೂ ಸುಲಭದಲ್ಲಿ ನಡೆದುಹೋಯಿತು. ಸದಾಶಿವ ನಗರದ ಪಾರ್ಕ್‌ನ ಎದುರಿಗಿರುವ ಆಟದ ಮೈದಾನವನ್ನು ಆರಿಸಿದರು. ಕರಪತ್ರಗಳನ್ನು ಮುದ್ರಿಸಿದರು. ಮಾಜಿ ಮಂತ್ರಿಗಳಿಂದ ಉದ್ಘಾಟನೆ - ಬಳಿಕ ಮುಂದೆ ಇರುವ ಕೆಲವು ಮುಖ್ಯರ ಮೀಸೆ ಬೋಳಿಸುವಿಕೆ ಕಾರ್ಯಕ್ರಮ. ಮೀಸೆ ಬೋಳಿಸುತ್ತಿದ್ದಂತೆಯೆ ಬೆಂಗಳೂರಿನ ಶ್ರೇಷ್ಠ ಗಾಯಕ/ಗಾಯಕಿಯರಿಂದ ಸಂಗೀತ - ಇಪ್ಪತ್ತು ಸ್ಪೀಕರ್‌ಗಳು!

ಹುಟ್ಟುಹಬ್ಬ ಆಚರಣೆಯ ಉದ್ಘಾಟನೆ ಬೆಳಿಗ್ಗೆ ಒಂಭತ್ತು ಗಂಟೆಗೆ. ಹಿಂದಿನ ದಿನವೇ ಸಿಂಗಾರಗೊಂಡು ತಲೆ ಎತ್ತಿದ್ದ ಶಾಮಿಯಾನದಿಂದ ಬೆಳಗ್ಗೆ ಆರು ಗಂಟೆಯಿಂದಲೇ ಸಿನೇಮಾ ಸಂಗಿತ. ಆದಿತ್ಯವಾರವಾದುದರಿಂದ ಜನರು ಸೇರಿಯೇ ಸೇರಿದರು ಸ್ತ್ರೀಯರಿಗೆ ಪ್ರವೇಶವಿರಲಿಲ್ಲ. ಇಂಥಾ ಸಮಾರಂಭಗಳಿಗೆಂದೇ ಜನ್ಮತಾಳಿರುವ ನಿರುದ್ಯೋಗಿಗಳು ಇರುವಾಗ ಪ್ರೇಕ್ಷಕರಿಗೆ ಹೇಗೆ ಕೊರತೆ ಇದ್ದೀತು?

ಸರಿ. ಬಹಳ ಅಪರೂಪಕ್ಕೆ ಎಂಬಂತೆ ಮಂತ್ರಿಗಳು ಸಮಯಕ್ಕೆ ಸರಿಯಾಗಿ ಬಂದರು. ಕಾರಣ ಈಗವರು ಮಾಜಿ ಮಂತ್ರಿಗಳು - ಮಂತ್ರಿಮಂಡಲದ ಕಲಸು ಮೇಲೋಗರದಲ್ಲಿ ಮಂತ್ರ ಪದವಿ ಕಳೆದುಕೊಂಡವರು.

ಗಣಪತಿಯ ಸ್ತೋತ್ರದಿಂದ ಸಭೆ ಆರಂಭ. ಈ ಬಗೆಯ ದಿನಾಚರಣೆಯ ಮಹತ್ವ - ಸರ್ವಾಧಿಕಾರವನ್ನು ಬುಡ ಸಹಿತ ಕಿತ್ತೆಸೆಯುವ ಈ ಪ್ರಯತ್ನ - ಮುಂತಾಗಿ ಪ್ರಾರಂಭಿಕ ಭಾಷಣ - ಚಪ್ಪಾಳೆ - ಸಂಗೀತ. ಗೆಳೆಯರ ಬಳಗದ ಅಧ್ಯಕ್ಷರ ಭಾಷಣದ ಬಳಿಕ ವೇದಿಕೆಯ ಮೇಲೆ ಇರುವರೆಲ್ಲಾ ಕೆಳಗಿಳಿದರು - ಮಾಜಿ ಮಂತ್ರಿಗಳು ಮತ್ತು ಬಳಗದ ನಾಲ್ವರು ಗೆಳೆಯರು ಮಾತ್ರಮೇಲೆ ಉಳಿದರು. ಕಾರ್ಯಕ್ರಮದ ಕ್ರಿಯಾಭಾಗ ಮೊದಲಾಯಿತು - ಜೀವಂತ ಸಂಗಿತ ಮೊಳಗಿತು.

ಮಾಜಿ ಮಂತ್ರಿಗಳ ಮೀಸೆ ಪರಿಚಯ ಹೀಗೆ ಮುಂದರಿಯಿತು: 'ಮಾನ್ಯರಿಗೆ ಲಕ್ಷಣವಾದ ಮೀಸೆ ಇದೆ. ಈ ಮೀಸೆಯನ್ನು ಮೆಚ್ಚಿಕೊಂಡೇ ಮತದಾರರು ಇವರನ್ನು ವಿಧಾನ ಸಭೆಗೆ ಆರಿಸಿದರು. ಆದರೆ ಗ್ರಹಗತಿ ಚೆನ್ನಾಗಿರಲಿಲ್ಲವಾದುದರಿಂದ, ಸಿಕ್ಕಿದ ಮಂತ್ರಿ ಪದವಿ ಕಳೆದುಹೋಯಿತು. ಇನ್ನು ಮಿಸೆ ಇದ್ದು ಏನು ಉಪಯೋಗ - ಎಂಬ ಮೌಲ್ಯಾಧಾರಿತ ಸಿದ್ಧಾಂತದಲ್ಲಿ ನಂಬುಗೆ ಇರಿಸಿರುವ ಮಾಜಿ ಮಂತ್ರಿಗಳು ಆ

ಕಾಣಾಕ್ಕಾಗಿಯೆ ಮೀಸೆ ಬೋಳಿಸಿಕೊಳ್ಳಲು ಬಂದಿರುತ್ತಾರೆ. ಇವರಿಗೆ ಜಯವಾಗಲಿ - ಜೈ. ಇನ್ನು ಮುಂದೆ, ಇವರಿಗೆ ಇನ್ನೊಮ್ಮೆ ಮಂತ್ರಿ ಪದವಿ ಸಿಗುವವರೆಗೆ ಮೀಸೆ ಬೆಳೆಯದಿರಲಿ. ಜೈ''

ಮಾಜಿ ಮಂತ್ರಿಗಳು ಸಭೆಗೆ ಕೈ ಮುಗಿದು, ವೇದಿಕೆಯ ಮಧ್ಯದಲ್ಲಿ ಇರಿಸಿದ್ದ ಏರು ಕುರ್ಚಿಯ ಮೇಲೆ ಕುಳಿತರು. ಹಾಡು ಸಾಗುತ್ತಲೇ ಇತ್ತು. ಅವರ ಎದೆಗೆ ಖಾದಿ ಬಟ್ಟೆಯ ತುಂಡನ್ನು ಹೊದಿಸಿದರು. ಬಳಿಕ ಎಲ್ಲಾ ಟಿ.ವಿ. ಕ್ಯಾಮರಾಗಳು ಸಿದ್ಧಿವಾಗಿರುವಂತೆ, ವರದಿಗಾರರು ಸಿದ್ಧವಾಗಿರುವಂತೆ, ಗೆಳೆಯರ ಬಳಗದ ಅಧ್ಯಕ್ಷ, ಅವರ ಮೀಸೆಗೆ ನೊರೆ ಬರುವ ಸಾಬೂನು ಬಳಿದು, ಕ್ಷೌರ ಕತ್ತಿಯನ್ನು ಪ್ರೇಕ್ಷಕ ವರ್ಗಕ್ಕೆ ತೋರಿಸಿ ''ಸರ್ವಾಧಿಕಾರಕ್ಕೆ ಧಿಕ್ಕಾರ'' ಎಂದು ಬೊಬ್ಬಿಟ್ಟು ಟಿ.ವಿ. ಕ್ಯಾಮರಾದವರಿಗೆ ಸೂಚನೆ ಕೊಟ್ಟು, ಮಂತ್ರಿಗಳ ಅಮೂಲ್ಯವಾದ ಮೀಸೆಯನ್ನು ತೆಗೆದೇ ಬಿಟ್ಟ. ಜನ ಆನಂದ ಸಾಗರದಲ್ಲಿ ಮುಳುಗಿ ಎದ್ದಿತು. ಮಾಜಿ ಮಂತ್ರಿಗಳು ವೇದಿಕೆಯಿಂದ ಕೆಳಗೆ ಇಳಿದರು.

ಮುಂದಿನ ಸರತಿ ಒಬ್ಬ ಸಂಗೀತಗಾರರದ್ದು. ಅವರಿಗೆ ಸೊಗಸಾದ ಮೀಸೆ ಇತ್ತು. ಅದಕ್ಕವರು ದಿನವು ಆರೈಕೆ ಮಾಡುತ್ತಿದ್ದರು. ಆದರೆ ಅವರ ಶಿಷ್ಯ ವರ್ಗದ ಸಂಖ್ಯೆ ದಿನದಿಂದ ದಿನಕ್ಕೆ ಕುಗ್ಗುತ್ತಾ ಹೋದುದರಿಂದ, ಹಣೆಯ ಮೇಲಿರುವ ನಾಮಕ್ಕೂ ಮೊಗದ ಮೇಲಿರುವ ಮೀಸೆಗೂ ಯವ ತಾಳಲಯ ಅನ್ಯೋನ್ಯತೆ ಕೂಡಿ ಬಾರದೆ ಹೋದುದರಿಂದ, ಭೈರಪ್ಪನವರ ಮಂದ್ರ ಕಾದಂಬರಿಯ ಹಾಡುಗಾರನಿಗೆ ಮೀಸೆ ಇರಲಿಲ್ಲ ಎಂದು ತಿಳಿದ ಬಳಿಕ, ತನ್ನ ಮಿಸೆಯನ್ನು ಆಹುತಿ ಕೊಡಲು ನಿರ್ಧರಿಸಿ, ವೇದಿಕೆಯ ಮೇಲೆ ಬಂದು, ಸಭಿಕರಿಗೆ ಕೈಮುಗಿದು, ಶಾಸ್ತ್ರೀಯ ಗಾಯನ ಮೊಳಗುತ್ತಿದ್ದಂತೆಯ, ವೇದಿಕೆಯ ಮಧ್ಯಭಾಗದಲ್ಲಿದ್ದ ಕುರ್ಚಿಯ ಮೇಲೆ ಕುಳಿತು, ತನ್ನ ಹೆಗಲಲ್ಲಿದ್ದ ಕಾಶ್ಮೀರಿ ಶಾಲನ್ನು ಕುತ್ತಿಗೆಯಿಂದ ಕೆಳಬಿಟ್ಟು ತನ್ನ ಮಿಸೆಯನ್ನು ಅರ್ಪಿಸಲು ಅಣಿಯಾದರು - ಕೆಲವೇ ನಿಮಿಷದಲ್ಲಿ ಅವರ ಮೀಸೆ ಕಾಣೆಯಾಯಿತು - ಬಳಿಕ ಅವರು ವೇದಿಕೆಯಿಂದ ಕೆಳಗಿಳಿಯುತ್ತಿದ್ದಂತೆಯೆ ಮುದುಕರೊಬ್ಬರು ಮುಂದೆ ಬಂದು ತಾನವರ ಶಿಷ್ಯನಾಗುತ್ತೇನೆಂದು ಸೂಚಿಸಿ ಅವರ ಪಾದಸ್ಪರ್ಶ ಮಾಡಿದರು.

ಇದನ್ನೆಲ್ಲಾ ದೂರದಿಂದ ನೋಡುತ್ತಿದ್ದ ಘನ ಮೀಸೆಯನ್ನು ಹೊತ್ತಿದ್ದ ಪೋಲಿಸರೊಬ್ಬರು, ವೇದಿಕೆಯ ಮೇಲೇರಿ, ಧ್ವನಿವರ್ಧಕವನ್ನು ಕೈಗೆತ್ತಿಕೊಂಡು ''ಒಂದು ಕಾಲದಲ್ಲಿ ಈ ಮೀಸೆಗೆ ಸಾಕುಬೇಕಷ್ಟು ಮಾರ್ಯದೆ ಇತ್ತು. ಈಗದು ಇಲ್ಲ. ಎಂದಿಗೆ ನನ್ನ ಮೊಮ್ಮಕ್ಕಳಿಗೆ ನನ್ನ ಮೀಸೆ ಆಟದ ವಸ್ತುವಾಯಿತೋ, ಎಂದಿಗೆ ಸಿನೇಮಾ ಧಾರಾವಾಹಿಗಳಲ್ಲಿ ಈ ಮೀಸೆಯ ಪ್ರತಿ ಮಾಡಿದರೊ, ಎಂದಿಗೆ ನನ್ನ ಮೇಲಾಫೀಸರ್ ನಿನ್ನಂಥ ಪಾಪ ಜೀವಕ್ಕೆ ಈ ಮೀಸೆ ಯಾಕಯ್ಯಾ? - ಎಂದು ಕೇಳಲು ಪ್ರಾರಂಭಿಸಿದರೋ, ಅಂದಿನಿಂದ ಈ ಮೀಸೆ ನನಗೆ ಬೇಡವಾಗಿದೆ. ತೆಗೆದುಬಿಡಿ ಅದನ್ನು - ಎಂದು ಆಜ್ಞೆ ಹೊರಡಿಸಿದರು. ಸಂಗೀತ ಸುರುವಾಯಿತು. ಪೋಲಿಸರ ಮೀಸೆ ಲಯಬದ್ಧವಾಗಿ ಅವರ ತುಟಿಯ ಮೇಲಿಂದ ಮಾಯವಾಯಿತು.

ಅಷ್ಟರಲ್ಲಿ ಒಂದಿಷ್ಟು ಗಾಬರಿಯಿಂದ, ಮುಖದ ಕೆಳಭಾಗವನ್ನು ಉಣ್ಣೆಯ ಶಾಲಿನಲ್ಲಿ ಮುಚ್ಚಿಕೊಂಡಿದ್ದ ವ್ಯಕ್ತಿ- ಎಲ್ಲರನ್ನು ಬದಿಗೆ ಸರಿಸಿ, ವೇದಿಕೆಯ ಮೇಲೆ ಬಂದು ಗೆಳೆಯರ ಬಳಗದ ಅಧ್ಯಕ್ಷರೊಡನೆ ''ನನ್ನ ಮಾರ್ಯಾದೆ ಉಳಿಸಿ'' ಎಂದಿತು. ಅಧ್ಯಕ್ಷರು ಕಾರಣ ಕೇಳಿದಾಗ ವ್ಯಕ್ತಿ ಉತ್ತರಿಸಿದ್ದು ಹೀಗೆ: ''ನೋಡಿ ನನ್ನ ಹೆಂಡತಿಯ ಮೇಲೆ ನನಗೆ ಯಾವ ಅಧಿಕಾರವು ಇಲ್ಲ. ಅವಳು ಹೇಳಿದ ಎಲ್ಲಾ ಕೆಲಸ ಮಾಡುತ್ತೇನೆ. ಆದರು ಅವಳಿಗೆ ನನ್ನ ಮೀಸೆಯ ಮೇಲೆ ಕಣ್ಣು. ನನ್ನ ತುಟಿಯ ಮೇಲೆ ಇಷ್ಟು ಸವುರವಾಗಿ ಸರಳರೇಖೆಯಂತೆ ಕಾಣಿಸುವ ಈ ಮೀಸೆಯನ್ನು ಅವಳು ದ್ವೇಷಿಸುತ್ತಾಳೆ. ಈ ಸರಳ ರೇಖೆಯನ್ನು ಉಳಿಸುವುದಕ್ಕಾಗಿ ನಾನು ದಿನಕ್ಕೆ ಅರ್ಧಗಂಟೆ ಉಪಯೋಗಿಸುವುದರಿಂದ ಅವಳಿಗೆ ಹೊಟ್ಟೆಕಿಚ್ಚು. ಈ ಮೀಸೆ ನಿಮಗೆ ಒಪ್ಪುವುದಿಲ್ಲ - ಪೇಟೆಯಲ್ಲಿ ದಪ್ಪದ ಮೀಸೆ ಮಾರಾಟಕ್ಕೆ ಸಿಗುತ್ತದೆ - ಅದನ್ನು ತಂದು ಹಚ್ಚಿಕೊಳ್ಳಿ - ಎಂದು ನನ್ನನ್ನು ಪ್ರೀತಿಸುತ್ತಲೇ ಇದ್ದವಳು , ಇವತ್ತು ಬೆಳಗ್ಗೆ ನನ್ನ ಮೇಲೆ ಬಂದ ಭಯಂಕರ ಸಿಟ್ಟಿನಿಂದಾಗಿ ನನ್ನನ್ನು ಕುರ್ಚಿಗೆ ಕಟ್ಟಿಹಾಕಿ, ರೇಜರ್ ತೆಗೆದುಕೊಂಡು ಮೀಸೆ ಬೋಳಿಸಲು ಪ್ರಾರಭಿಸಿದಳು. ಅರ್ಧ ಸರಳರೇಖೆ ಹೋಯಿತು, ಅಷ್ಟರಲ್ಲಿ ಅವಳ ಪ್ರಿಯವಾದ ಧಾರಾವಾಹಿ ಟಿ.ವಿ.ಯಲ್ಲಿ ಬಂತು. ಇನ್ನರ್ಧ ಸರಳರೇಖೆಯನ್ನು ಬೋಳಿಸದೆ, ಧಾರಾವಾಹಿ ನೋಡಲು ಹೋದಳು. ಉಳಿದ ಅರ್ಧಮೀಸೆ ಇಂಥಾ ಕಾರ್ಯಕ್ರಮದಲ್ಲಿಯೇ ಹೋಗಿಬಿಡಲಿ - ಎಂದು ನಾನಿಲ್ಲಿಗೆ ಬಂದಿದ್ದೇನೆ'' ಎಂದೆನ್ನುತ್ತಾ, ನನ್ನ ಮೊಗದ ಕೆಳ ಭಾಗವನ್ನು ಮುಚ್ಚಿದ್ದ ಶಾಲನ್ನು ತೆಗೆದು ಉಳಿದರ್ಧ ಸರಳರೇಖೆಯನ್ನು ಪ್ರೇಕ್ಷಕರಿಗೆ ತೋರಿತು. ಸಭಿಕರು ''ಗಂಡನ ಮೀಸೆ ಬೋಳಿಸಿದ ಹೆಂಗಸರಿಗೆ ಜಯವಾಗಲಿ'' ಎಂದು ಜೈಕಾರ ಮಾಡುತ್ತಿದ್ದಂತೆ, ಉಳಿದರ್ಧ ಮೀಸೆ ಹೋಯಿತು.


ಅಷ್ಟರಲ್ಲಿ ಕ್ಷೌರ ಕತ್ತಿಯ ಹರಿತ ಹೋಗಿತ್ತು. ಅಧ್ಯಕ್ಷರು ವೇದಿಕೆಯ ಸಿಮೆಂಟಿನ ಮಗ್ಗುಲಿಗೆ ತಿಕ್ಕಿ ಹರಿತಗೊಳಿಸುತ್ತಿದ್ದಾಗಲೇ, ಗಡ್ಡ ಮೀಸೆಗಳಿರುವ ಯುವಕನೊಬ್ಬ ವೇದಿಕೆ ಏರಿದ. ಗೆಳೆಯರ ಪ್ರಶ್ನೆಗೆ, ಸಿನೇಮಾದ ದುರಂತ ನಾಯಕನ ಸ್ವರದಲ್ಲಿ ಆತ ಹೇಳತೊಡಗಿದ: ''ನಾನೊಬ್ಬ ಭಗ್ನಪ್ರೇಮಿ. ನನ್ನನ್ನು ತನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದವಳು, ನಿನ್ನೆ ಬೇರೊಬ್ಬನನ್ನು ಮದುವೆಯಾದಳು. ಮದುವೆಗೆ ಮುಂಚೆ ನನ್ನ ಗಡ್ಡ ಮೀಸೆಗಳನ್ನು ಅವಳು ಬಹಳ ಪ್ರೀತಿಸುತ್ತಿದ್ದಳು. ಬಹುಶಃ ನನಗಿಂತ ಹೆಚ್ಚಾಗಿ ನನ್ನ ಗಡ್ಡ ಮೀಸೆಗಳನ್ನು ಅವಳು ಪ್ರೀತಿಸುತ್ತಿದ್ದಳು. ನನಗದು ತಿಳಿದಿರಲಿಲ್ಲ. ನನ್ನ ಗಡ್ಡ ಮೀಸೆ ಬೋಳಿಸಿ ಅವಳ ಪ್ರೇಮ ಪರೀಕ್ಷೆ ಮಾಡಬಹುದಿತ್ತು. ಆದರೆ ಅವಳು ಈ ಗಡ್ಡವನ್ನು ಮೃದುವಾಗಿ ತಟ್ಟುತ್ತಾ, ಸಿನೆಮಾ ಹಾಡು ಹೇಳುತ್ತಿದ್ದುದನ್ನು ಕೇಳಿಯೆ, ನಾನು ಪ್ರೇಮ ಅಮರ ಎಂದು ತಿಳಿದಿದ್ದೆ. ನಿನ್ನೆಯ ತನಕವೂ ಅವಳ ಪ್ರೇಮ ಅಮರವೇ ಆಗಿತ್ತು. ಅವಳ ಮದುವೆಯೊಡನೆ ಆ ಪ್ರೇಮ ಹೋಗಿಬಿಟ್ಟಿದೆ. ಈಗ ನನಗೆ ಈ ಗಡ್ಡ ಮೀಸೆಗಳ ಮೇಲೆ ಸಿಟ್ಟು ಬಂದಿದೆ. ಪ್ರೇಮ ಹೋದ ಮೇಲೆ ಆ ಪ್ರೇಮಕ್ಕೆ ಸಾಕ್ಷಿ ಆಗಿದ್ದ ಗಡ್ಡ ಮೀಸೆ ಇದ್ದು ಪ್ರಯೋಜನವೇನು ಹೇಳಿ? ತೆಗೆದುಬಿಡಿ ಈ ಎರಡನ್ನೂ'' ಎಂದ.

''ಸರ್, ನಮ್ಮ ಕಾರ್ಯಕ್ರಮದಲ್ಲಿ ನಾವು ಮೀಸೆ ಮಾತ್ರ ಬೋಳಿಸುತ್ತೇವೆ. ನಿಮ್ಮ ಮೀಸೆ ಬೇಕಾದರೆ ಬೋಳಿಸುತ್ತೇವೆ - ಗಡ್ಡ ಮಾತ್ರ ಸಾಧ್ಯವಿಲ್ಲ. ಗಡ್ಡ ಬೋಳಿಸುವ ಕಾರ್ಯಕ್ರಮ ಬೇರೆ ಯಾರಾದರು ದೇಶಭಕ್ತರು ಮಾಡಿಯಾರು. ಆಗ ನೀವು ಅಲ್ಲಿಗೆ ಹೋಗಿ ಗಡ್ಡದಾಹುತಿ ಕೊಡಿ. ಇಲ್ಲಿ ಮೀಸೆ ಮಾತ್ರ.''

''ಮಿಸೆಯಾದರೆ ಮೀಸೆ! ಹೋಗಲಿ ಈ ಪ್ರೇಮ ಸಾಕ್ಷಿ'' ಎಂದು ಯುವಕ ಕುರ್ಚಿಯಲ್ಲಿ ಕುಳಿತೇ ಬಿಟ್ಟ - ಕ್ಷಣಾರ್ಧದಲ್ಲಿ ಅವನ ಮೀಸೆ, ಹರಿತ ಕಳೆದುಕೊಂಡಿದ್ದ ಕ್ಷೌರ ಕತ್ತಿಯ ಬಾಯಿಗೆ ಸಿಕ್ಕಿ, 'ಅಯೊಯ್ಯೋ'' ಎಂಬ ಕೂಗಿನೊಂದಿಗೆ ಹೋಗಿಬಿಟ್ಟಿತು.

ಕಾರ್ಯಕ್ರಮ ಮಧ್ಯಾಹ್ನದ ತನಕ ಜರಗಿತು - ನೂರ ಮೂವತ್ತೇಳು ಮೀಸೆಗಳು ಆಹುತಿ ಆದವು. ಗೆಳೆಯರ ಬಳಗದ ಈ ಕಾರ್ಯಕ್ರಮದ ಚಿತ್ರವಾಗಲಿ, ವರದಿ ವಿವರಣೆಗಳಾಗಲಿ ಮರುದಿನದ ಪತ್ರಿಕೆಯಲ್ಲಿ ಬರಲಿಲ್ಲ - ಟಿ.ವಿ. ಸುದ್ದಿ ಸಮಾಚಾರದಲ್ಲಿಯೂ ಬರಲಿಲ್ಲ. ಹಾಗಿದ್ದರೂ ಗೆಳೆಯರು ಧೃತಿಗೆಡಲಿಲ್ಲ. ಹಿಟ್ಲರನ ಹುಟ್ಟು ಹಬ್ಬ ಆಚರಿಸಿದ್ದಕ್ಕಾಗಿ, ಜರ್ಮನಿಯ ಸರಕಾರ ತಮ್ಮನ್ನು ಆ ದೇಶಕ್ಕೆ ಆಮಂತ್ರಿಸಲು ಸಾಕು - ಎಂಬ ನಿರಿಕ್ಷೆಯಲ್ಲಿಯೇ ಅವರು ಉಸಿರಾಡುತ್ತಿದ್ದಾರೆ, ಈಗಲೂ.

★★★




ಅಮ್ಮಾ, ಅಪ್ಪಾ, ನೀವುಗಳು ಯವಾಗ್ಲೂ ಮನ್ಗೇ ಇರ್ತೀರಲ್ಲಾ,
ನನ್ಮೇಲೆ ನಂಬ್ಕೇ ಅನ್ನೋದೇ ಇಲ್ವಾ!

# ರಾ.ಶಿ. ಅವರ ಜೊತೆ

– ಪ್ರಕಾಶ್

ಅಪ್ಪನ ಆಪ್ತ ಮಿತ್ರರೊಬ್ಬರು ನಿಧನರಾಗಿ ಕೆಲವೇ ದಿನಗಳಾಗಿತ್ತು. ನಾನು, ಸೇಂಟ್ ಜಾನ್ಸ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ಯಾವುದೊ ಕೆಲಸದ ಮೇಲೆ ನಾನು, ಅಪ್ಪನನ್ನ ಕಾಲೇಜಿಗೆ ಕರೆದುಕೊಂಡು ಹೋಗಿದ್ದೆ. ವಾಪಸ್ ಬರುವಾಗ ರಾ.ಶಿ. ಮಾತನಾಡದೆ ಕುಳಿತಿದ್ದರು. ಅವರ ಮನಸ್ಸು ಕಲಕಿ ಹೋದದ್ದು ನಮಗೆಲ್ಲ ತಿಳಿದಿತ್ತು. ವಿಲ್ಸನ್ ಗಾರ್ಡನ್ ಕ್ರೆಮಟೋರಿಯಂ ಹತ್ತಿರ ಕಾರು ಬಂದಾಗ ನಾನು ಸುಮ್ಮನಿರಲಾರದೆ, "This is where the journey ends!" ಅಂದೆ. ರಾ.ಶಿ. ನಿಟ್ಟುಸಿರು ಇಟ್ಟರು. "Or perhaps begins!" ಅಂದರು. ಕಾಕ ತಾಳೀಯವೋ ಏನೊ ಅವರ mood ಚೇತರಿಸಿಕೊಂಡು, ಎಂದಿನಂತಾದರು!!

★★★

ನನಗೆ ಆಗ ಸುಮಾರು ನಾಲ್ಕು ವಯಸ್ಸಾಗಿತ್ತೇನೋ! ಮಧ್ಯಾನ್ಹ ರಾ.ಶಿ. ನಿದ್ದೆ ಮಡುತ್ತಿದ್ದಾಗ, ನಾನು ಬಹು ಸಾಹಸದಿಂದ ಮುಂಬಾಗಿಲ ಮೇಲೆ ಹತ್ತಿ, ಕಾಲಿಂಗ್ ಬೆಲ್ ಬಾರಿಸಿದೆ. ಜರಾಸಂಧನನ್ನು ಕಂಡ ಭೀಮನಂತೆ ರಾ.ಶಿ. ಕೆಂಗಣ್ಣು ಬೀರಿ ಹೊರಬಂದರು. ಗಡಸು ದನಿಯಲ್ಲಿ ''ಯಾರೋ ಅದು?' ಎಂದರು. ನಾನು 'ನೀನ್ ಯಾರೋ, ಅಮ್ಮನ್ನ ಕರೀತೀನಿ ನೋಡು!' ಅಂತ ಕೂಗಿದೆ (ಎಂದು ಪ್ರತೀತಿ!) ರಾ.ಶಿ. ಸದ್ದು ಮಾಡದೆ ಒಳಕ್ಕೆ ಹೊರಟು ಹೋದರು!!


★★★

ನಾನು ಮೆಡಿಕಲ್ ಕಾಲೇಜ್‌ನಲ್ಲಿ ಓದುತ್ತಿದ್ದೆ. ಆಸ್ಪತ್ರೆಯಲ್ಲಿ ನೋಡಿದ ಕೇಸುಗಳ ಬಗ್ಗೆ ಅಪ್ಪನ್ನ ಕೇಳಿ Discuss ಮಾಡೇಕು ಅಂತ ಐಡಿಯಾ ಬಂತು, ನಾಲ್ಕೈದು ಕೇಸುಗಳ ವಿವರಗಳನ್ನ ಗುರುತು ಹಾಕಿಕೊಂಡು ಮನೆಗೆ ಬಂದೆ. ಸಂಜೆ ಅವರಹತ್ತಿರ ವಿವರ ಹೇಳಿದೆ. ಅಪ್ಪ ತಾಳ್ಮೆಯಿಂದ ನಾನು ಹೇಳಿದ್ದನ್ನೆಲ್ಲ ಕೇಳಿದರು. ಕೊನೆಗೆ, ನಗುತ್ತ ಹೇಳಿದರು. 'ನೊಡೋ, ನಿಂ ಮೇಷ್ಟರುಗಳು ಹೇಗೆ ಹೇಳಿಕೊಡ್ತಾರೊ ಅದೇ ತರಹ ಕಲಿತುಕೊ! ನಾನು ನಿನಗೆ Short Cut ವಿಧಾನಗಳನ್ನು ಮಾತ್ರ ಹೇಳಿ ಕೊಡಬಲ್ಲೆ! ಹಾಗೆ ನೀನು ಪರೀಕ್ಷೇಲಿ ಕೇಸ್ ಡಿಸ್ಕಸ್ ಮಾಡಿದರೆ ಗೋತಾ ಹೊಡೀತೀಯ! ಅಂದರು. ನನಗೆ ಆಗ ನಿರಾಶೆ, ಕೋಪ ಸಹಜವಾಗಿಯೇ ಆಯಿತು. ಆದರೆ, ಈಗ ಸುಮಾರು 20 ವರುಷ Teach ಮಾಡಿದ ಮೇಲೆ, ರಾ.ಶಿ. ಹೇಳಿದ ಮಾತಿನ ಸತ್ಯದ ಅರಿವು ಆಗ್ತಾ ಇದೆ.'

★★★

ನಂ ಮನೇ ರಸ್ತೇ ಕೊನೇಲಿ ಒಬ್ಬ ವೃದ್ಧೆಗೆ ನ್ಯುಮೋನಿಯಾ. ಆಗಿನ ಕಾಲದಲ್ಲಿ Antibiotics ಇರಲಿಲ್ಲ. ರಾ.ಶಿ. ಈಕೆ ಮನೆಗೆ ಹೋಗಿ, ಸಂಬಂಧಿಕರಿಗೆ, ಈಕೆ ಉಳಿಯೋದು ಕಷ್ಟ ಅಂತ ಹೇಳಿದರು. 'ನನ್ನ ಬ್ಯಾಗ್‌ನಲ್ಲಿ Medicinal Brandy ಇತ್ತು ಕಣೋ! ಪಾಪ ಮುದುಕಿ ಹೇಗೂ ಹೋಗ್ತಾಳಲ್ಲ, ಸಂತೋಷವಾಗಾರು ಆಗಲಿ ಅಂತ ಬ್ರಾಂಡಿಗೆ ಬಿಸಿನೀರು ಸೇರಿಸಿ ಕುಡಿಸಿದರು. ಮರುದಿನ ಬೆಳಗ್ಗೆ ಆಕೆಯ ಮನೆ ಮುಂದೆ ಬೆಂಕಿ ಇದೆಯೇ ಎಂದು ನೋಡಲು ಹೋದರು. ಆಶ್ಚರ್ಯ! ಅವಳಿಗೆ ರಾತ್ರಿ ಜ್ವರ ಬಿಟ್ಟು ಗುಣಮುಖಳಾಗಿದ್ದಾಳೆ! 'ಡಾಕ್ಟರೆ, ನಿನ್ನೆ ರಾತ್ರೆ ಕೊಟ್ಟ ಔಷಧೀನೇ ಇವತ್ತೂ ಕೊಡಿ!' ಅಂದಳು. 'ಆಗ ಏನು ಮಾಡಿದಿರಿ?' ಅಂದೆ. 'ಮಾಡೋದೇನು, ಈ Immoral Dilemma ತಲೇಲಿ ಹೊತ್ತುಕೊಂಡು ಕ್ಲಿನಿಕ್‌ಗೆ ಹೋದೆ!' ಅಂದರು!

★★★



ಪ್ರತಿಬಾರಿ ದಾಟಿದಾಗಲೆಲ್ಲಾ 'ನಮಸ್ಕಾರ' ಅಂತ
ಹೇಳೋ ಅಗತ್ಯ ಏನೂ ಇಲ್ಲ ಅಂತ ಅನ್ಸುತೆ ನಂಗೆ

ನವ್ಯ

# ಅನಸೂಯಾ ಪ್ರಿಯಂವದೆಯರ ಒಂದು ಸಂವಾದ

– ವಾಣಿ ಸುರೇಶ್

ಮೊನ್ನೆ ಬೆಳಗ್ಗೆ, ಸುಮಾರು 10 ಘಂಟೆಗೆ door bell ring ಆಯಿತು. ಮನಸ್ಸಿನಲ್ಲದ ಮನಸ್ಸಿಂದ ಎದ್ದು ಹೋದೆ- ಎ.ಎಂ. ನಲ್ಲಿ ಬರ್‍ತಿದ್ದ ಡಾ|| ರಮಣಿಯವರ fluteನ ನಾದಲಹರಿಯಲ್ಲಿ ಮುಳುಗಿ ಹೋಗಿದ್ದ ನನ್ನ ಮನಸ್ಸು ತನ್ನ ಬ್ರಹ್ಮಾನಂದದ ಶಿಖರದಿಂದ ಕರ್ಕಶವಾದ ಕಾಲಿಂಗ್ ಬೆಲ್ ಶಬ್ದ ಕೇಳಿ ಝಾಡಿಸಿ ಒದೆಸಿಕೊಂಡೋರ ತರಾ ಕೆಳಗೆ ಉರುಳಿಬಿತ್ತು! ಗಂಡ ಮಕ್ಕಳನ್ನ ಅಂದಿನ ಮಟ್ಟಿಗೆ Successful ಆಗಿ ಸ್ಕೂಲು, ಕಾಲೇಜು, ಆಫೀಸುಗಳಿಗೆ pack off ಮಾಡಿದ್ದ ಮಹಾ achivementನ celebrate ಮಾಡಕ್ಕೋಸ್ಕರ ನಾನು ಪ್ರತೀದಿನಾ ಒಂದು ಕೆಲಸ ಮಾಡ್ತೀನಿ. ಕಿಟಕಿಗಳನ್ನೆಲ್ಲಾ ದೊಡ್ಡದಾಗಿ ತೆಗೆದು ಥಂಡಿ ಗಾಳಿಯ ಹಿನ್ನೆಲೇಲಿ ಒಂದು ದೊಡ್ಡ cup ಮಸಾಲಾ ಟೀ ಮಾಡ್ಕೊಂಡು, ಅವತ್ತಿನ ಎಲ್ಲಾ news paperಗಳನ್ನೂ ಪಕ್ಕದಲ್ಲಿ ಇಟ್ಕೊಂಡು ಒಂದು ಘಂಟೆ ನಿಧಾನವಾಗಿ ಓದ್ತೀನಿ - ಅದಕ್ಕೆ ಭಂಗ ಬಂದರೆ ರೇಗಿಹೋಗತ್ತೆ ನಂಗೆ.... ಸರೀ, ವರ್ತಮಾನಕ್ಕೆ ಬರೋಣ. ಬೀದೀ ಬಾಗಿಲಲ್ಲಿ ಬಂದು ನಿಂತಿರುವ ಪೀಡೆ ಯಾರಿರಬಹುದು ಅಂತ ಬೈಕೊಂಡೇ ಬಾಗಿಲು ತೆಗೆದರೆ ಯಾರೂಂತೀರಾ? ಪೀಡೆ, ಗೀಡೆ ಅಂತೆಲ್ಲಾ ಬೈಯ್ಯಬಾರದಾಗಿತ್ತು ಛೇ ಅಂತ ತಕ್ಷಣ ಮನಸ್ಸಲ್ಲೇ ಸಾರಿ ಹೇಳ್ಕೊಂಡೆ. ಯಾಕೇಂದ್ರೆ, ಬಂದಿದ್ದಿದ್ದು ನನ್ನ ಬೆಸ್ಟ್ ಫ್ರೆಂಡು ತಾರಾ! ತಾರಾ ಯಾಕೆ ಸ್ಪೆಷಲ್ ಗೊತ್ತಾ? ನಾನೂ ಅವಳೂ ಚಿಕ್ಕೋರಾಗಿದ್ರಿಂದ ಸ್ನೇಹಿತರು ಎಲ್ಲಾ ವಿಷಯಗಳಲ್ಲೂ, ಅದರಲ್ಲೂ ನಮ್ಮಿಬ್ಬರ Frequency ಒಂದೇ.

"ಏ ಯಾಕೆ ಹಾಗೆ ಕಕ್ಕಾಬಿಕ್ಕಿಯಾಗಿ ನೋಡ್ತೀ? ಮೊನ್ನೆ ಅಪರಂಜಿ birthday partyಲಿ ಕಾಣಿಸಲಿಲ್ವಲ್ಲಾ, ಯಾಕಿರಬಹುದು ಅಂತ ವಿಚಾರಿಸೋಣಾಂತ ಬಂದೆ" ಅಂತ ಹೇಳ್ತಾ ಒಳಗೆ ಹೆಜ್ಜೆಯಿಟ್ಟಳು. ಚಪ್ಪಲಿ ಬಿಚ್ಚಿ, ಆರಾಮವಾಗಿ ಇನ್ನೂ ಒಂದೆರಡು ದಿಂಬುಗಳನ್ನು ಎಳ್ಕೊಂಡು ನಾನು ಕೂತಿದ್ದ ಜಾಗವಲ್ಲೇ ಕೂತುಕೊಂಡ್ಳು.

"ಮೊದಲು ಹೋಗಿ ನಂಗೂ ಒಂದು ಕಪ್ nice hot tea ಮಾಡ್ಕೊಂಡ್ಬಾ. ಬೆಳಗ್ಗಿಂದ ಇವರೆಲ್ಲಾರ್ನೂ ಹೊರಗೆ ಅಟ್ಟಿ, ಬೀಗ ಎಲ್ಲಾ ಸರಿಯಾಗಿ ಹಾಕ್ಕೊಂಡು ಬರುವಷ್ಟರಲ್ಲಿ ಸಾಕಾಯ್ತು. ಎಲ್ಲಾ ಕೆಲಸಾನೂ ಸರಸರಾಂತ ಮುಗಿಸಿ ಮೊನ್ನೆ ನೀನು ಯಾಕೆ ಕಾಣಲಿಲ್ಲಾಂತ ಕೇಳ್ಕೊಂಡು, ಒಂದಷ್ಟು ಹರಟೆ ಹೊಡೆದು ಹೋಗೋಣಾಂತ ಬಂದೆ" ಅಂತಂದಳು ಕಾಲು ನೀಡ್ತಾ.

''ಒಂದು phone ಮಾಡಿದ್ರೆ ಸಾಕಾಗಿತ್ತಲ್ಲೇ'' ಅಂದೆ, ನಂಗಿನ್ನೂ ನನ್ನ ಬ್ರಹ್ಮಾನಂದವನ್ನು ಹಾಳುಮಾಡಿದವರನ್ನು ಅಷ್ಟು ಬೇಗ ಕ್ಷಮಿಸುವಷ್ಟು ಉದಾರತೆ ಬಂದಿರಲಿಲ್ಲ.

''ಈ ಹಾಳು BSNL ನೋರು hike ಮಾಡಿರೋ rates ನಲ್ಲಿ ಮೊದಲಿನ ಹಾಗೆ ನಿರಾಳವಾಗಿ ಘಂಟೆಗಟ್ಟಲೆ ಮಾತಾಡಕ್ಕೂ ಮನಸ್ಸು ಬರಲ್ಲವಲ್ಲೇ. ಅದಕ್ಕೆ ನಾನೇ ಒಂದು ಹೆಜ್ಜೆ ಬಂದ್ಬಿಟ್ಟೆ - ಹೇಳದೇ ಕೇಳದೇ. ನೀನೇನು ನನಗೋಸ್ಕರ ತೊಂದರೆ ತೊಗೋಬೇಕಿಲ್ಲ. ಅನ್ನ-ಮೊಸರು ಇದ್ರೆ ಸಾಕು, ನಾನು ಬೆಳಗ್ಗೆ ರವೀಗೆ ಡಬ್ಬಕ್ಕೇಂತ ಮಾಡಿದ ರಾಜ್‌ಮಾ, ಚಪಾತಿ ಹಿಡ್ಕೊಂಡು ಬಂದಿದೀನಿ'' ಅಂದಳು.

ಸ್ವಲ್ಪ ಜೀವ ಬಂತೂನ್ನಿ ನನಗೆ. ಸರೀ, ಬೇಗ ಹೋಗಿ ಇನ್ನೊಂದು ಕಪ್ ಟೀ ಮಾಡ್ಕೊಂಡು ತಂದು ಅವಳೆದುರಿಗೆ ಹಿಡಿದೆ. ಅಷ್ಟೊತ್ತಿಗೆ ಪ್ರೋಗ್ರಾಂ ಕೂಡಾ ಮುಗಿದಿದ್ರಿಂದ ರೇಡಿಯೋ ಆರಿಸಿ ನಾನೂ ಬಂದು ಕೂತ್ಕೊಂಡೆ.

ನಾನೂ ನನ್ನ ಯಜಮಾನರೂ ಹಿಂದಿನ ದಿನ ಭಾರತೀಯ ವಿದ್ಯಾಭವನಕ್ಕೆ ಆ ಕುಂಭದ್ರೋಣ ಮಳೇಲಿ ಸಿಕ್ಕಿಹಾಕ್ಕೊಂಡು, traffic jamನಲ್ಲಿ ಬೈಕೊಂಡು ಬೈಸಿಕೊಂಡು ಸಾಕುಸಾಕಾಗಿ ಬಂದಿದ್ದು. BTS busನೋನು ಸಿಡಿಸಿದ್ದ ಕೆಸರು ಇವರ ಷರ್ಟಿಗೆ, ನನ್ನ favourite raw silk ಸೀರೇಗೆ spray work ಮಾಡಿದ್ದು; Discovery Channel ನಲ್ಲಿದ್ದಿದ್ದ ಇವರ favourite programme ತಪ್ಪಿಸಿದ್ದಕ್ಕೇ ಅಲ್ಲದೆ ಸೋಮವಾರ Officeಗೇಂತ ಇಟ್ಟಿದ ಇಸ್ತ್ರಿಮಾಡಿದ ಷರ್ಟು ಹಾಳಾಗಿದ್ದ ಕೋಪಕ್ಕೆ ಇವರು ಅಲ್ಲಿ ಖಾಲಿ ಇದ್ದಿದ್ದ ಕೊಟ್ಟ ಕೊನೇ ಸಾಲಲ್ಲಿ ಶೀನೂ ಮಾತು ಶುರುವಾಗೋವರ್ಗೂ ಗುರ್ ಅಂತನ್ಕೊಂಡೇ ಕೂತಿದ್ದು; ಮುಗಿದ ತಕ್ಷಣ ''ನೀನಿನ್ನು ನಿನ್ನ friends ಜೊತೆ ಹರಟೆ ಹೊಡೀತಾ ನಿಂತರೆ ಆಗಲ್ಲ. ಇನ್ನೂ ಮತ್ತೆ ಬನಶಂಕರೀವರ್ಗೆ ಮೆರವಣಿಗೆ ಮಾಡ್ಕೊಂಡು ಹೋಗ್ಬೇಕು ಈ ಕೊಚ್ಚೇಲಿ' ಅಂತ ಗದರಿಸ್ಕೊಂಡು ಧಡಾ ಬಡಾಂತ ವಾಪಸ್ ಕರ್‍ಕೊಂಬಂದಿದ್ದು - ಎಲ್ಲಾ ಹೇಳಿದೆ. ಪ್ಚ್, ಪ್ಚ್ ಅಂತ ಲೊಚಗುಟ್ಕೊಂಡು ತಾರಾ ಸಿಂಪತಿಸಿ ''ಏನು ಮಾಡೋದೇ? ಪೂರ್ವಜನ್ಮ ಕೃತಂ ಪಾಪಂ ಭಾರ್ಯಾ/ಭರ್ತಾ ರೂಪೇನ ಬಾಧ್ಯತೇ'' ಅಂತ ಮೊದಲೇ ಗಾದೆ ಇಲ್ವೇಂ''ದಳು.

ಅವಳು ಸ್ವಲ್ಪ ಹಾಗೇ. ಯಾವಾಗಲೂ ವೇದಾಂತ, ಉಪನಿಷತ್ತೂ ಅಂತ ಸಿಕ್ಕ ಸಿಕ್ಕ discourse ಗಳಿಗೆಲ್ಲಾ ಹೋಗೋ ಆಸಾಮಿ. ''ಪೂರ್ವ ಜನ್ಮ ಕೃತಂ ಪುಣ್ಯಂ ಭರ್ತಾರೂಪೇನ ರಕ್ಷತೇ'' ಅನ್ನೋದನ್ನ ಹೀಗೆ ಸಲೀಸಾಗಿ ತಿರುಚಿ ಹೇಳಿದ್ದು ಕೇಳಿ ನಗು ಬಂತು. ಸರೀ, ಇಬ್ಬರೂ ಚೆನ್ನಾಗಿ ಬಿದ್ ಬಿದ್ ನಕ್ವಿ - ಹೇಳೋರು ಕೇಳೋರು ಯಾರಿರಲಿಲ್ಲವಲ್ಲ ಆಗ ನಮಗೆ ಮನೇಲಿ.

"ಅದಕ್ಕೇ ನಾನು, ಕುಮಾರಾ ಪಾರ್ಕ್‌ಲ್ಲಿರೋ ಚಿಕ್ಕಮ್ಮನ ಮನೆಗೆ ಅವತ್ತು ಮಧ್ಯಾನ್ಹಾನೇ ಹೋಗಿ ಹರಟೇ ಹೊಡೆದು, ಭಾನುವಾರ ಬೆಳಗ್ಗೆ ಇವರುಗಳು ಎದ್ದು brunchಗೆ readyಯಾಗೋಷ್ಟರಲ್ಲಿ ಮನೆ ಸೇರಿದ್ದು" ಅಂತ ಅವಳ brilliant planನ ಬಗ್ಗೆ ಹೇಳ್ಕೊಂಡಳು. "very wise of you ಕಣೇ" ಅಂತ ಹೊಗಳಿದೆ. ಅಷ್ಟೊತ್ತಿಗೆ ಬಿಸಿ ಬಿಸೀ ಟೀ ನನ್ನ ಮೂಡನ್ನೂ ಸರಿಮಾಡಿಬಿಟ್ಟಿತ್ತು. "ಸರೀಮಾ, let us come back to the topic of the day" ಅಂತ ಪೀಠಿಕೆ ಹಾಕಿ "ಮೊನ್ನೆ ಹೇಗಿತ್ತೂಂತನ್ನಿಸ್ತು ನಿಂಗೆ" ಅಂತ ಶುರು ಮಾಡಿದ್ನು. "Simple ಆಗಿ ಚೆನ್ನಾಗೇನೂ ಇತ್ತು. ಆದರೆ ಇನ್ನೊಂದು ಚೂರು shorten ಮಾಡಿದ್ದಿದ್ರೆ ಇನ್ನೂ ಚೆನ್ನಾಗಿರ್ತಿತ್ತೇನೋ ಅಲ್ವಾ?" ಅಂತಂದೆ - ಒದ್ದೇ ಬಟ್ಟೇಲಿ ನನ್ನ ಪಕ್ಕದಲ್ಲಿ ಗುರ್ ಅಂತ ಕೂತಿದ್ದ ಇವರನ್ನ ಜ್ಞಾಪಿಸ್ಕೊಂಡು. "ನಂಗೇನೋ ಇಷ್ಟ ಆಯ್ತಪ್ಪಾ. ಅಲ್ವೇ ಚಿನ್ನ ತೂಗೋ ಅಲ್ಲಿ ನೊಣಕ್ಕೇನು ಕೆಲಸ ಅಂತನ್ನೋ ಹಾಗೆ ಸತ್ಯೂನ್ನ ಯಾಕೆ ಕರೆದರು ಇವರುಗಳು? ಅಂತ ಅನ್ಕೊಂಡಿದ್ದೆ invitation ನೋಡಿ. ಆದರೆ ಎಷ್ಟು ಚೆನ್ನಾಗಿ ಮಾತಾಡಿದ್ರಲ್ವಾ ಯಾವ ಹುತ್ತದಲ್ಲಿ ಯಾವ ಹಾವೋ ಅಂತ ಅದಕ್ಕೇ ಹೇಳೋದೂ"ಂತಂದಳು.

ಮೊದಲೇ ಹೇಳಿದನಲ್ಲ, ನಮ್ಮ ತಾರಾ ಗಾದೆ ಪ್ರೇಮಿ. ಮಾತಿಗ್ಮುಂಚೆ ಗಾದೆಗಳನ್ನ quote ಮಾಡ್ತಾನೇ ಇರ್ತಾಳೆ! "Don't jump like that ಕಣೇ, ಒಂದು orderನಲ್ಲಿ ಹೋಗೋಣ ತಡೀ. Let us start from the beginning" ಅಂತ prompt ಮಾಡಿದೆ.

"ಸರಿಯಮ್ಮ, compering was ok, messagesಲ್ಲಿ ಕೆಲವನ್ನಾದ್ರೂ ಓದಬಹುದಾಗಿತ್ತೇನೋ. ಆದರೆ time ಎಲ್ಲಿ ಹೊಂದಿಸಿರೋರು ಪಾಪ. ಇನ್ನು invocation ಪಾರ್ವತೀಸುತರ್ದು ಹಾಡು - ತುಂಬಾ ಚೆನ್ನಾಗಿತ್ತು ಅಲ್ವಾ" ಅಂತ ಅಂದಳು.

"ಹೌದು ಕಣೇ. ಅವರೇ ಬರೆದಿದ್ದಂತಲ್ಲ! ಎಷ್ಟು ಚೆನ್ನಾಗಿ voice modulate ಮಾಡ್ಕೊಂಡು lively ಯಾಗಿ ಹಾಡಿದ್ರು, ಅಲ್ವಾ. ಒಳ್ಳೇ Jump start ಕೊಟ್ಟ ಹಾಗಿತ್ತು functionಗೇಂತ" ಹೇಳಿದೆ.

"ಅಲ್ವೇ, ಸತ್ಯೂನ್ನ ನೋಡಿದ್ಯಾ, ಎಷ್ಟು ಪ್ರಸ್ತುತವಾಗಿ ಹಾಸ್ಯದ ಲೇಪನ ಹಚ್ಚಿ ಮಾತಾಡಿದರು! ಅವರು ಕನ್ನಡದೋರು ಅಂತ ಗೊತ್ತಿದ್ದರೂ, ನಮ್ಮ ತರ ಹೀಗೆ ಇಂಗ್ಲೀಷ್ ಬೆರಸದೇ ಅಷ್ಟು ಶುದ್ಧವಾಗಿ ಸುಲಲಿತವಾಗಿ ಕನ್ನಡದಲ್ಲಿ ಭಾಷಣ ಮಾಡಬಹುದೂಂತ ಅನ್ಕೊಂಡಿರಲಿಲ್ಲ" ಅಂತ ಅವರು ಮಾತಾಡಿದ್ದು ನೆನೆಸ್ಕೊಂಡು ತಾನೂ for a change ಶುದ್ಧವಾದ ಕನ್ನಡದಲ್ಲೇ comment ಮಾಡಿದ್ಳು.

"ಹೌದು ಕಣೇ. It was short & sweet indeed" ಅಂತ ನಮ್ಮ ಬೆಂಗಳೂರಿನ ಕಂಗ್ಲೀಷ್‌ನಲ್ಲಿ reactಿಸಿದೆ.

''ಏ, ಇನ್ನೊಂದು ವಿಷಯ. ಆ ಭುವನೇಶ್ವರಿ ಹೆಗಡೇನ ನೋಡಿದ್ಯಾ?'' ಅಂತ sudden ಆಗಿ ಕೇಳಿದಳು emphatic ಆಗಿ.

''ಹೂಂ, ಏನು'' ಅಂತಂದೆ - ಇವಳು ಎಲ್ಲಿ ಸಾಮಾನ್ಯ - ಹೆಂಗಸರ ತರ ಅವಳ ಮಟ್ಟದಿಂದ ಕೆಳಗೆ ಇಳಿದು ''ಅವರ ಸೀರೆ border ನೋಡಿದ್ಯಾ ಅವರ ವಾಲೆ ಎಷ್ಟು ಹೊಳೀತಿತ್ತು, ಎಷ್ಟು carrot ಇದ್ಯೋ'' ಅಂತ ಎಲ್ಲಿ ಹೇಳಿಬಿಡ್ತಾಳೋಂತ ಸ್ವಲ್ಪ ಗಾಬರೀನೇ ಆಯ್ತೂನ್ನಿ. ಸದ್ಯ ಅದೊಂದೂ ಆಗಲಿಲ್ಲ. ದೇವರ ದಯ!

''ಅಲ್ವೆ, ಅವರು ಅಷ್ಟು young ಅಂತ first of all ಗೊತ್ತಿರಲಿಲ್ಲ. ಹೋಗಲೀಂದ್ರೆ ಎಂಥಾ ನಗು ಸರಸಿ ನೋಡಿದೆಯಾ? Face is the index of mind ಅನ್ನೋ ಹಾಗೆ ಮೊದಲಿಂದ್ಲೂ ಕೊನೇವರ್ಗೂ ಹಸನ್ಮುಖವೇ ಹಸನ್ಮುಖ. ಇಂಥಾ ಸಮಾರಂಭಗಳಿಗೆ ಇಂಥೋರನ್ನ ಕರೀಬೇಕು ನೋಡಮ್ಮಾ'' ಅಂತ ಸರ್ಟಿಫಿಕೇಟ್ ಕೊಟ್ಟೇ ಬಿಟ್ಟಳು.

''ಹೌದು ಕಣೇ, ಹಾಗಿಲ್ದೇ ಇದ್ದಿದ್ರೆ ಇಷ್ಟು ಸ್ವಲ್ಪ ಸಮಯದಲ್ಲಿ ಅಷ್ಟು ಚೆನ್ನಾಗಿರುವ humour ಬರೆಯಕ್ಕೆ ಹೇಗೆ ಸಾಧ್ಯವಾಗ್ತಿತ್ತು? ಸದ್ಯ ಮಹರಾಯಿತಿ, ಅವರು ಹೇಳಿದ ಹಾಗೇ ಈಗ ಬರ್ತಿರೋ ಹಾಸ್ಯಾಸ್ಪದ ಬರಹಗಳಿಂದ ಜಿಗುಪ್ಸೆಯಾಗಿ ತಾನು ಬರೆಯೋದು ನಿಲ್ಲಿಸದೇದ್ರೆ ಸಾಕು ನೋಡು'' ಅಂತಂದೆ.

''ಹೆಚ್.ಎಲ್. ಕೇಶವಮೂರ್ತಿಗೂ ಯಾಕೋ ಎಷ್ಟು ರೋಸಿ ಹೋದ ಹಾಗಿತ್ತು ನೋಡು ಎಷ್ಟು concerned ಆಗಿ serious ಆಗಿ ಮಾತಾಡಿದರು! ಏನೋಪ್ಪಾ ಸಂಸಾರತಾಪತ್ರಯ ಮರೆಯಕ್ಕೇಂತ ಒಂದು ಘಳಿಗೆ ಹಾಯಾಗಿರೋಣ ಅಂತ ಇವರೆಲ್ಲಾರೂ ಬರೆಯೋ ಹಾಸ್ಯ ಲೇಖನಗಳನ್ನ ಓದೋಣಾನ್ನಿಸತ್ತೆ. Sane ಆಗಿ ಬರೆಯೋರೆಲ್ಲಾ ಬರೆಯೋದಕ್ಕೇ ಜಿಗುಪ್ಸೆ ಪಟ್ಕೊಂಡು, ಬರೆಯೋದು ನಿಲ್ಲಿಸಿಬಿಟ್ಟರೆ ನಮ್ಮಂಥೋರಿಗೆ ಗತಿ ಏನೆ?!'' ಅಂತಂದ್ಳು.

''ಹೌದಲ್ವೇನೇ?'' ಅಂತ ನಾನೂ wondeರಿಸಿದೆ. (ಕ್ಷಮಿಸಿ, wondered ಅಂತ ಇನ್ನು ಹೇಗೆ ಕನ್ನಡದಲ್ಲಿ ಹೇಳ್ತೀರಿ, ಹೇಳಿ?!)

''ನೀನು ಏನೇ ಅನ್ನು, ಶೀನೂ ಸರಿ ಕಣೇ'' ಅಂತ ಮತ್ತೆ fresh breath ತೊಗೊಂಡು, straight ಆಗಿ ಕೂತ್ಕೊಂಡು ಹೇಳಿದಳು. ಮುಖ ಕಮಲದ ಹಾಗೆ ಅರಳಿತ್ತು.

''ಯಾಕೆ ಹೇಳು? ಅವರೂ ಸ್ವಲ್ಪ ಜಿಜ್ಞಾಸೇಲಿದ್ದ ಹಾಗಿತ್ತಲ್ವಾ'' ಅಂತಂದೆ. ''ಇರಬಹುದು. ಅವರೂ ಸಾಕಷ್ಟು ವಿಚಾರಪೂರ್ವಕವಾಗೇ ಮಾತಾಡಿದರೂ ಅದೇನು

remarkable sense of humourಏ ಅವರ್ದು. ನಮಗಂತೂ ಸಿಕ್ಕಾಪಟ್ಟೆ ಇಷ್ಟಾಪ್ಪಾ'' ಅಂತ ಹೈಸ್ಕೂಲು ಹುಡುಗೀರು hero worship ಮಾಡೋರ ಬಗ್ಗೆ ಮಾತಾಡೋ ತರ ಹೇಳಿದಳು.

''ಅದೇನೋ ಸರೀನ್ನು, ಅವರು ಶುರು ಮಾಡಿದ ತಕ್ಷಣ ಹೇಳಿದ ಪರಮಹಂಸ ಪ್ರಶಸ್ತಿಯಿಂದ ಹಿಡಿದು, tape ಕತ್ತರಿಸುವಾಗಿನ ಕತ್ತರಿ ಎಪಿಸೋಡು, ಉತ್ತರ ಕರ್ನಾಟಕ ಜನರ - ಇತರರಿಗೆ ಒರಟು ಅನ್ನಿಸಬಹುದಾದ ಅವರ ಹಾಸ್ಯಪರತೆ ಬಗ್ಗೆ ಹೇಳಿದ ಜೋಕಿನವರೆಗೂ ಎಲ್ಲಾ A-one ಆಗಿತ್ತು. ನಮ್ಮ ಯಜಮಾನರಂತೂ ಆ ಕ್ಷಣಕ್ಕೆ ಅವರ wet, designer ಷರ್ಟನ್ನೂ ಮರೆತು ಬಿದ್ದು ಬಿದ್ದು ನಗ್ತಿದ್ರು'' ಅಂತ ಅದನ್ನ ನೆನಸ್ಕೊಂಡು ನಾನೂ ಹಸನ್ಮುಖವಾಗೇ ಹೇಳಿದೆ. Silver, Golden wedding day ಗಳ ಮಧ್ಯ ನೇತಾಡ್ತಿರೋ ನಮ್ಮ ಜಮಾನಾದೋರ್ಗೆಲ್ಲಾ ಪತಿಯೇ ಪರದೈವ ತಾನೇ? ಅದ್ರಿಂದ ಅವರು ನಕ್ಕರೆ ನಾನೂ ನೆಮ್ಮದಿಯಾಗಿ ಜೋರಾಗಿ ನಗ್ತೀನಿ, ಅವರು ಹ್ಯಾಪ್‌ಮೋರೆ ಹಾಕ್ಕೊಂಡರೆ ನಾನೂ ಹ್ಯಾಪ್‌ಮೋರೆ....!

''ಅಲ್ವೇ, ವೆಂಕಟಸುಬ್ಬಯ್ಯನೋರ್ದೇನು ಹೇಳ್ಲೆ ಇಲ್ವಲ್ಲಾ. ಅವರು ಹೇಳಿದ ಸರ್ವಜ್ಞನ ಪದ ಚೆನ್ನಾಗಿತ್ತಲ್ವಾ, ಎಲ್ರೂ ಅಷ್ಟಾಗಿ ಕೇಳಿರಲಿಲ್ಲ'' ಅಂತಂದೆ ನಾನು.

''ಅವರದ್ದು ಏನು ಹೇಳಲಿ ಹೇಳು. ಹೇಳೀ ಕೇಳೀ ಕನ್ನಡ ಸಾಹಿತ್ಯ ಪ್ರಪಂಚದ ಭೀಷ್ಮರಲ್ವಾ'' ಅಂದಳು.

''ಆದರೆ ನೀನು ಏನೇ ಹೇಳು. ಈ ಸಮಾರಂಭಗಳ ಅಧ್ಯಕ್ಷರ ಕೆಲಸ ತುಂಬಾನೇ ಕಷ್ಟ ಬಿಡು. ಎಲ್ಲರದ್ದೂ ಭಾಷಣಗಳ ಹೊಡೆತವಾದ ಮೇಲೆ, ಕೊನೆವರೆಗೂ ಕಾದಮೇಲೆ ಅವರ turn ಬರತ್ತೆ. ಅಷ್ಟೊತ್ತಿಗೆ ಅರ್ಧ ಮುಕ್ಕಾಲು ಜನ ಎದ್ದು ಹೋಗಿರ್ತಾರೆ. ಎಂಥಾ ಭೀಷ್ಮರಿಗೂ ಖಾಲಿ hall ನೋಡಿದರೆ, ಉತ್ಸಾಹ ಎಲ್ಲಾ ಜರ್ ಅಂತ ಇಳಿದು ಶಿಖಂಡೀನೇ ಎದುರಿಗೆ ನಿಂತ ಹಾಗಾಗಿ ಶಸ್ತ್ರ (ವಾಕ್) ಸನ್ಯಾಸ ತೊಗೊಳ್ಳೋ ಹಾಗನ್ನಿಸತ್ತೇನೋ ಅಲ್ವಾ?'' ಅಂದೆ.

''ಸರಿಯಾಗಿ ಹೇಳಿದೆ ಕಣೇ'' ಅಂತ ತಾರಾ ಅಂದಳು, ಆಮೇಲೆ ''ಇನ್ನೊಂದು ವಿಷಯ observe ಮಾಡಿದ್ಯಾ? ಓಂ ಪ್ರಕಾಶ್ ಎಷ್ಟು clear ಆಗಿ ನಮ್ಮ ಕನ್ನಡ news readers ಗಿಂತಾ ಸ್ಪಷ್ಟವಾಗಿ ಸನ್ಮಾನಿತರ ಪರಿಚಯಾನ ಓದಿದರಲ್ವಾ?'' ಅಂತ ಸೇರಿಸಿದಳು.

''ಹೌದೇ ನನ್ನ ಮಗಾನೂ ಓದ್ತಾನೆ 10th std kannada textನ. ಅವನಿಗೆ ಅದನ್ನ ತೋರಿಸ್ಬೇಕಾಗಿತ್ತೂಂತ ಎಷ್ಟು ಅನ್ನಿಸ್ತು ಗೊತ್ತಾ?'' ಅಂತಂದೆ.

''ಹೋಗಲಿ ಸನ್ಮಾನದ part ಹೇಗಿತ್ತು ಹೇಳು'' ಅಂತಂದಳು.

''ಅಯ್ಯೋ, ಅದೇನೇ ಮಾಮೂಲು, ಹಣ್ಣು - ಹಂಪಲು, ಶಾಲು-ಹಾರ ಇತ್ಯಾದಿಗಳಲ್ಲೇನು ಹೊಸತನ ಬಿಡು. ಆದರೆ deserving peopleನ recognise ಮಾಡಿದರು ನೋಡು. ಅಲ್ಲೇ ಹೆಚ್ಚುಗಾರಿಕೆ ಇದ್ದಿದ್ದು'' ಅಂತಂದೆ.

''Correct ಆಗಿ ಹೇಳಿದೆ ಕಣೇ. Invitation ನೋಡಿದ ತಕ್ಷಣ ನಾನೂ ನಿನ್ನ ಹಾಗೇ ಅನ್ಕೊಂಡೇಂತಂದಳು.'' ಆಮೇಲೆ ಇದ್ದಕ್ಕಿದ್ದಾಗೇ ''ಏ, ತಡೀ ತಡೀ; ಎಲ್ಲಾನ್ನೂ discuss ಮಾಡಿ ಲಕ್ಷ್ಮಣ್ ಕಾರ್ಟೂನ್ಸ್‌ನೇ ಮರೆತುಬಿಟ್ವಲ್ಲೇ'' ನಂಗಂತೂ it stole the show ಅಂತನ್ನಿಸ್ತಪ್ಪಾ. ಆದರೆ ಎಲ್ಲಾ cartoon ಕೆಳಗಿದ್ದಿದ್ದ legendನೂ ಅಷ್ಟು explain ಮಾಡಿದ್ದು ಸ್ವಲ್ಪ jpke ಗಳನ್ನ explain ಮಾಡಿದತರ ಆಗ್ಹೋಯ್ತಲ್ಲಾ'' ಅಂತಂದಳು. ''ಅದು ಪರ್ವಾಗಿಲ್ಲ ಬಿಡು, ಎಲ್ಲರೂ ನಿನ್ನಷ್ಟೇ sharp ಆಗಿರ್ತಾರಾ? ಇನ್ನೊಂದು ತಮಾಷೆ ನಡೀತು ಗೊತ್ತಾ. ನೀನು ಮುಂ....ದೆ ಕೂತಿದ್ರಿಂದ ಗೊತ್ತಾಗಿರಲಾರದು - ನಮ್ಮ ಬೆಂಗಳೂರಿನೋರ smartnessಉ, ಸಮಯ ಸಾಧಕತನ. ಅಲ್ವೇ ಆ cartoon show ಗೋಸ್ಕರ ದೀಪಗಳನ್ನ ಆರಿಸಿದರಲ್ಲ, ಆರಿಸಕ್ಕೆ ಮುಂಚೆ ತುಂಬಿ ತುಳುಕ್ತಿದ್ದ haller ಮೇಲೆ ದೀಪ ಹಚ್ಚಾಗ ಹೇಗಿತ್ತೂಂತ ನೋಡಿದ್ಯಾ'' ಅಂತ ಕೇಳಿದೆ. ''ಅಯ್ಯೋ ಅದೇನು ಮಹಾ? ನಂಗೊತ್ತಿಲ್ವಾ ನಮ್ಮ ಜನಗಳ ಬುದ್ಧಿ. ಎಂಥಾ ಘಟಾನುಘಟಿಗಳ ಸಂಗೀತ ಕಛೇರಿಗಳಲ್ಲೂ ತನಿ ಬಿಟ್ಟ ತಕ್ಷಣ ಸಿನೆಮಾ intervalನಲ್ಲಿ ಎದ್ಹೋಗೋ ಹಾಗೇ - ಅಲ್ಲಾ ಅಲ್ಲ ತಡೀ, ಇನ್ನೂ ಸರಿಯಾಗಿ ಹೇಳ್ತೀನಿ - ಧಾರೆ ಊಟದ first ಪಂಕ್ತೀಗೆ ಮೇಲೆ ಬಿದ್ಕೊಂಡು ನುಗ್ಗೋ ಹಾಗೇ ಎಲ್ಲರೂ ಧಮ ಧಮ ಅಂತ ಎದ್ದು ಹೋಗಿದ್ದರು - of course ಈಗೆಲ್ಲಾ moulded chairs ಹಾಕೋದ್ರಿಂದ ಸದ್ದು ಶಬ್ದ ಆಗಲ್ಲ ಅಷ್ಟೇ'' ಅಂದಳು. ''ಥೇ ಹೌದೇ, ಸರಿಯಾಗಿ ಹೇಳಿದೆ. ನೀನು ಕೊಟ್ಟ comparisonಉ apt ಆಗಿತ್ತು ನೋಡು. ಥೂ ನಾಚಿಕೆಗೇಡಪ್ಪಾ'' ಅಂತ ಲೊಚಗುಟ್ಟಿದೆ.


''ಹೋಗ್ಲಿ ಬಿಡು ದುಃಖಪಡ್ಬೇಡಾ. ಒಂದು ಕಾಲ ಭಾಗದಷ್ಟಾದ್ರೂ ನಮ್ಮಂಥಹ ಸಾಹಿತ್ಯ ಸರಸ್ವತಿಯ ಆರಾಧಕರು ಉಳಿದಿರ್ತೀವಲ್ಲ, organisersನ ಬಿಟ್ಟು'' ಅಂತ ಸಮಾಧಾನ ಮಾಡಿ,

''ಅಂದ್ಹಾಗೇ ಆ ಬಿಡುಗಡೆ ಆದ ಪುಸ್ತಕಗಳನ್ನ ಕೊಂಡುಕೊಂಡೆಯಾ?'' ಅಂತ questioನಿಸಿದಳು.

''ಅಯ್ಯೋ ಎಲ್ಲಮ್ಮಾ ಅದಕ್ಕೆಲ್ಲಾ timeಉ function ಮುಗಿದಿದ್ದೇ ತಡ ಇವರ ವರಾತ ಶುರುವಾಯ್ತು - ಎರಡು ವರ್ಷದ ಮಗು ಮನೇಗ್ಹೋಗೋಣ,

ಹೋಗೋಣಾಂತ ಹಟ ಮಾಡತ್ತಲ್ಲಾ ಹಾಗೇ - 'ಬಾ ಬೇಗ, ಹೊತ್ತಾಯ್ತು. ಆಮೇಲೆ ತೊಗೊಳ್ಳೋವಂತೇಂತ. ನಾನೇನೋ 'ಇವತ್ತು ರಿಯಾಯಿತಿ ಇದೇರೀಂತ ಅಂದೆ. ಆದ್ರೂ 'ಬಾ, ಬಾ, ಪರ್ವಾಗಿಲ್ಲ. ನೀನು ನಿನ್ನ friends ಜೊತೆ shopping ನೆವದಲ್ಲಿ complexಗೆ ಹೋದಾಗೆಲ್ಲಾ ಆ chart ಅಂಗಡೀಗಳ್ಗೆ, ice cream ಪಾರ್ಲರ್‌ಗಳ್ಗೆ ಹೋಗೋದು ನಿಲ್ಸಿ, ಸುಮ್ಮನೆ ಮನೆಗೆ ಬಂದು ಮರ್ಯಾದೆಯಾಗಿ ಅನ್ನ, ಸಾರು, ಪಲ್ಯ ತಿನ್ನು. ಎರಡು ಸಲ ಹಾಗೆ ಮಾಡೋಷ್ಟಲ್ಲಿ ಆ ತರಹದ ಎರಡಲ್ಲ, ನಾಲ್ಕು ಪುಸ್ತಕ ರಿಯಾಯಿತಿ ಇಲ್ಲದೇ ಕೊಂಡ್ಕೋಬಹುದೂಂತ ಅಂದ್ಬಿಟ್ಟರು ನೋಡೇ'' ಅಂತ complainಮಾಡಿದೆ.

''It can't be better on a lovely day like this ಕಣೇ. ಸ್ವಲ್ಪ ಮಾರ್ಕೆಟ್ಟಿಗೆ ಹೋಗಿ ಬರೋಣ ಬಾ. ನಾನೂ ಹುಣಸೇ ರಸ ಮಾಡಕ್ಕೆ ಹುಣಸೇಕಾಯಿ, ಮಾಕಳೀಬೇರು ಎಲ್ಲಾ ತಗೋಬೇಕಿತ್ತು'' ಅಂತ ತಾರಾನೂ ಎದ್ದಳು. ''ಒಳ್ಳೆಯ ದಪ್ಪಗಿರೋ ನಾರಿಲ್ಲದ ಬೆಟ್ಟದ ನೆಲ್ಲೀಕಾಯಿ ಬಂದಿದ್ಯಂತೆಕಣೇ, ನಡೀಮತ್ತೆ, ನಿನ್ನೆ ಪಕ್ಕದ ಮನೆಯೋರು ಹೇಳ್ತಿದ್ರು'' ಅಂತ ಹೇಳಿ ನಾನೂ ಎದ್ದೆ.



ಈಗ ಆಗ್ತಿರೋ ಇನ್‌ಫರ್ಮೇಷನ್ ಎಕ್ಸ್‌ಪ್ಲೋಷನ್ ನೋಡಿದ್ರೆ,
ಕೂಪ ಮಂಡೂಕ ಆಗಿರೋದೇ ವಾಸಿ ಅಲ್ವೇನ್ರೀ

# ಆಧುನಿಕ ಸೀತೆ

- ಪ್ರೇಮಾ ಭಟ್

ತ್ರೇತಾಯುಗದಲ್ಲಿ ಶ್ರೀರಾಮಚಂದ್ರನೊಂದಿಗೆ, ಸೀತೆ ಹೇಗೆ ನಡೆದುಕೊಳ್ಳುತ್ತಿದ್ದಳು ಎನ್ನುವುದು ನಿನಗೆ ಗೊತ್ತೇನೆ? ರಾಮಾಯಣವನ್ನು ನೀನು ಓದಿದ್ದರೆ ತಾನೆ ಗೊತ್ತಾಗೋದು ಗಂಡನೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬೋದು, ನರಪೇತಲ ನಾಣಿ ಹೆಂಡತಿಯ ಮುಂದೆ ಗೊಣಗಿಕೊಂಡ. ದಢೂತಿ ದೇಹವನ್ನು ಹೊತ್ತು ಹೊರಲಾರದೆ ಕಷ್ಟಪಡುತ್ತ ಮನೆ ಕೆಲಸ ಮಾಡುತ್ತಿದ್ದ ಸೀತೆಗೆ ಈ ಮಾತಿನಿಂದ ರೇಗದಿದ್ದೀತೆ? ಗಂಡ ಸ್ವಲ್ಪವೂ ತನ್ನ ಕಡೆಗೆ ನಿಗ ಕೊಡುವುದಿಲ್ಲವೆಂಬ ಸಂದೇಹ ಅವಳಿಗೆ. ಬೆಳಗಾಗೆದ್ದು ಮುಖದಿದಿರು ವೃತ್ತಪತ್ರಿಕೆ ಹಿಡಿದು ಕುಳಿತುಬಿಟ್ಟರೆ ಅವನು ಮೇಲೇಳುವುದು ತನ್ನ ಕೋಪಕ್ಕೆ ಸಿಡಿಮಿಡಿಗೊಂಡು ಎಂದು ಗೊತ್ತಿದೆ ಅವಳಿಗೆ. ಬಿಟ್ಟಾಳೆ ಎಸೆದಳು ಒಂದು ರಾಮಬಾಣವನ್ನು (ಮನೆಗೆಲಸದಲ್ಲಿ ಗಂಡ ನೆರವಾಗುವುದಿಲ್ಲ ಎಂಬ ಕೋಪಕ್ಕೆ)

''ಅಯ್ಯೋ! ಪಾಪ, ಸೀತೆ ಏನು ನನ್ನ ಹಾಗೆ ಸ್ಥೂಲಾ ಕಾಯದವಳಲ್ಲ ಬಿಡಿ. ಮೈಭಾರವಿಲ್ಲದ ತೆಳ್ಳನೆಯ ದೇಹ ಅವಳದ್ದು, ಸುಲಭವಾಗಿ ಮನೆ ಗೆಲಸದಲ್ಲಿ ಮೈ ಬಗ್ಗುತ್ತಿತ್ತು. ಶ್ರೀರಾಮಚಂದ್ರ ಅವಳನ್ನು ಎತ್ತಿಕೊಂಡು ಅಡ್ಡಾಡಿಸಬಹುದಾದ ದೇಹ ಅವಳದ್ದು.''

''ಎಲ್ಲಿ ಕಂಡಿದ್ದೀಯೇ ನೀನವಳನ್ನು, ಕಂಡವರ ಹಾಗೆ ವರ್ಣನೆ ಮಾಡುತ್ತಿದ್ದೀಯಲ್ಲ''

''ನೋಡೋಕೆ ಸೀತೆ ಸಿಗಲುಂಟೆ? ರಾಮಾಯಣ ಓದಿಲ್ಲವೆ? ಅರಣ್ಯದಲ್ಲಿ ಎದುರಾದ ವಿರಾಧ ಅವಳನ್ನು ಎತ್ತಿ ಕಂಕುಳಲ್ಲಿರುಕಿಕೊಳ್ಳಬೇಕಾದರೆ ಅವಳ ತೂಕವೆಷ್ಟು ಎಂದು ಅರಿಯದಷ್ಟು ದಡ್ಡ ಏನಲ್ಲ ನಾನು. ಇಷ್ಟಕ್ಕೂ ಫೋಟೋದಲ್ಲಿ ಸೀತೆಯ ತೂಕ ಎಷ್ಟಿದೆ ಮಹಾ. ಶ್ರೀರಾಮಚಂದ್ರನಿಗೆ ಸೀತೆಯನ್ನು ಕಂಡರೆ ಅದೆಷ್ಟೊಂದು ಪ್ರೀತಿ ಅದೆಷ್ಟೊಂದು ಅಕ್ಕರೆ ಅವನೇನು ನಿಮ್ಮ ಹಾಗೆ ಶೋಂಭೇರಿಯಲ್ಲ ಬಿಡಿ. ವನವಾಸದಲ್ಲಿ ಉದ್ದಕ್ಕೂ ಅವನು ಸೀತೆಯ ಕೈ ಹಿಡಿದುಕೊಂಡು ನಡೆದಿದ್ದ ಎಲ್ಲಿ ಬಿಟ್ಟಿದ್ದ ಆ ಅಮೃತ ಹಸ್ತವನ್ನು ಹೇಳಿ ನೋಡೋಣ'' ಎಂದಳು ನಾಣಿಯ ಹೆಂಡತಿ ಸೀತೆ.

''ನಿನಗೆ ರಾಮಾಯಣದ ಮಹತ್ವವೇ ಗೊತ್ತಿಲ್ಲ ಬಿಡು. ರಾವಣನನ್ನು ಗೆದ್ದ ರಾಮ ಸೀತೆಯನ್ನು ಪರಿಗ್ರಹಿಸಿದವನೆ? ಎಲ್ಲಿಯ ಮಾತು ಅಂತ ಆಡ್ತೀಯ. ತಗೊ ಶುರುವಾಯ್ತು ಜಗಳ.

''ನಂಗೂ ಗೊತ್ತೂರಿ ರಾಮಾಯಣ, ಶ್ರೀರಾಮಚಂದ್ರ ರಾವಣನ ಜೊತೆಗಿದ್ದು ಬಂದ ಸೀತೆಯನ್ನು ಪರಿಗ್ರಹಿಸಲಿಲ್ಲ. ಈ ವಿಷಯದಲ್ಲಿ ಶ್ರೀರಾಮಚಂದ್ರ ಕೊಂಚ ಮೊದ್ದು ಕಣ್ರಿ. ಬಾಯಿ ತಪ್ಪಿ ಏನೋ ಅಂದುಬಿಟ್ಟ. ಹಾಗಂತ ಅಗ್ನಿದೇವ ಅವಳನ್ನು ಮುಟ್ಟಿದನೆ? ಅವಳ ಸಚ್ಚಾರಿತ್ರ್ಯವನ್ನು ಬಣ್ಣಿಸುತ್ತಾ, ಸ್ವತಃ ಶ್ರೀರಾಮಚಂದ್ರನ ಅರಿವಿಗೆ ಬರದಿದ್ದ ಅವನಲ್ಲಿದ್ದ ದೈವತ್ವವನ್ನು ತಿಳಿಸಿಕೊಡುತ್ತ ಸೀತೆಯನ್ನು ಸ್ಪರ್ಶಿಸದೆ ಬಿಟ್ಟುಕೊಟ್ಟನಲ್ಲ. ನೀವೇ ಅಗ್ನಿದೇವನ ಸ್ಥಾನದಲ್ಲಿದ್ದಿದ್ದರೆ ಸೀತೆಯನ್ನು ಬಿಡುತ್ತಿದ್ದಿರೇನು? ಬಿಟ್ಟಸಿಕ್ಕಿದಳೆಂದು ಬಾಚಿ ತಬ್ಬಿಕೊಂಡು ನನ್ನ ಮೋರೆಯನ್ನು ಮರುಗುಟ್ಟಿ ನೋಡುತ್ತ ತದಕುತ್ತಿದ್ದಿರಿ. ರಾವಣನ ಸ್ಥಾನದಲ್ಲಿದ್ದರೂ ಹೀಗೆ ಮಾಡುತ್ತಿದ್ದಿರಿ. ರಾವಣನಾದರೂ ಪಾಪ ಭೀರುವಾಗಿದ್ದ. ಸೀತೆಯ ಅನುಮತಿ ಇಲ್ಲದೆ ಅವಳನ್ನು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ. ಆದರೆ ನೀವು ಹಾಗೆ ಮಾಡುತ್ತಿದ್ದಿರಿ ಎಂಬ ಭರವಸೆ ನನಗೆ ಖಂಡಿತಕ್ಕೂ ಇಲ್ಲ. ನಿಮ್ಮ ಮುಖಕ್ಕಿಷ್ಟು ಎಂದು ಅವಳು ಅವಡುಗಚ್ಚುತ್ತ ಗೊಣಗಿಕೊಂಡಳು. ಅವಳ ಮಾತು ಮುಂದುವರಿದೇ ಇತ್ತು. ಆ ಅಗಸನಾದರೋ ನಿಮ್ಮಂತವನೇ, ಹೆಂಡತಿ ನಾಲ್ಕು ದಿನ ತೌರು ಮನೆಯಲ್ಲಿದ್ದು ಬಂದರೆ ಅವನ ಬಾಯಲ್ಲಿ ಇಂಥ ಮಾತು ಬರೋದೆ? ನಾನು ಅವನ ಹೆಂಡತಿ ಸ್ಥಾನದಲ್ಲಿದ್ದಿದ್ದರೆ ಕೇಳೆ ಬಿಡುತ್ತಿದ್ದೆ. ನನ್ನ ಗೈರು ಹಾಜರಿಯಲ್ಲಿ ಅದೆಷ್ಟು ಮಂದಿ ಸುಂದರಾಂಗಿಯರ ಹಿಂದೆ ಬಿದ್ದಿದ್ದೆ ಅಂತ. ಬಸುರು ಬರದೆ ಇರುವ ಕಾರಣ ನೀವು ಮಾಡುವ ಅನ್ಯಾಯ ಬೆಳಕಿಗೆ ಬರೋದಿಲ್ಲ ಅಂತ. ನನ್ನ ಹೊಟ್ಟೆ ಮುಂದೆ ಬಂದಿಲ್ಲ ಯಾಕೆ ಅನುಮಾನ ಪಡ್ತೀಯ'' ಅಂತ ಕೇಳೇ ಬಿಡ್ತಿದ್ದೆ. ಆ ಕಾಲದಲ್ಲಿ ಅನುಮಾನ ಅವಮಾನ ಎಲ್ಲ ಹೆಣ್ಣಿಗೆ ಇತ್ತು, ಈಗ ಹಾಗಿಲ್ಲ. ಈಗ ಹುಡುಗೀರು ಬಾಯಲ್ಲಿ ಚಿನ್ನದ ಚಮಚ ಇಟ್ಕೊಂಡಿರೋಲ್ಲ. ಬಾಯಿ ತೆರೆದು ಮಾತನಾಡೋ ಧೈರ್ಯ ಬೆಳೆಸಿಕೊಂಡಿದ್ದಾರೆ. ನಾನು ಹಾಗೆ ನೀನು ಅಂದ್ರೆ ನಿಮ್ಮಪ್ಪ ಅಂತೇನೆ?

ಬೇಡ್ವೆ ಇಷ್ಟುದ್ದ ಮಾತು ಬೆಳೆಸಬೇಡ.

''ರಾಮಾಯಣನೂ ಹಾಗೆ ಕಣ್ರಿ ಉದ್ದುದ್ದ ಬೆಳೀತು. ಸೀತೆ ಮಹತ್ವ ಹೇಳೋಕೆ ಹೊಗಿ ರಾಮಯಣನೇ ಆಗ್ಹೋಯ್ತು. ರಾಮಾಯಣ ಶುರು ಮಾಡಿದ್ದೇನೆ ನೀವು ಮೇಲಕ್ಕೇಳೋರು. ಎಲ್ಲಿ ಈ ಕಣ್ಣೀರು ಬರಿಸೋ ಈರುಳ್ಳಿನ ಹೆಚ್ಚಿಕೊಡಿ ನೋಡೋಣ'' ಎಂದು ಅವಳು ಈರುಳ್ಳಿ ತಂದು ನಾಣಿಯ ಮುಂದೆ ಗುಡ್ಡೆ ಹಾಕಿದಳು.

''ಅರ್ಥವಾಯ್ತು ಬಿಡು ಇಷ್ಟಕ್ಕೆ ಈ ಪುರಾಣ ಬಿಟ್ಟೆ ಅನ್ನು'' ಅಳುಮೂಂಜಿ ಮಾಡಿಕೊಂಡು ಅವನು ವೃತ್ತ ಪತ್ರಿಕೆಯನ್ನು ಪಕ್ಕಕ್ಕಿಟ್ಟು ಈರುಳ್ಳಿ ಹೆಚ್ಚಲು ಕುಳಿತ.

★★★

# ಅಮ್ಮಾ ನಿನಗಾಣೆ

- ಎಚ್. ಗೋಪಾಲಕೃಷ್ಣ

ಎನಗೂ ಆಣೆ ಅಮ್ಮ ನಿನಗೂ ಆಣೆ
ಎನಗೂ ನಿನಗೂ ಎಂ ಎಲ್ಲೆಯೇಗಳಾಣೆ

ನಿನ್ನಬಿಟ್ಟು ಅನ್ಯರ ಭಜಿಸಿದರೆ ನಗೆ ಆಣೆ ಅಮ್ಮಾ
ಎನ್ನ ನೀ ಕೈಬಿಟ್ಟು ಹೋದರೆ ನಿನಗೆ ಆಣೆ


ಸೀಟು ಖುರ್ಚಿ ದಯದಲಿ ವಂಚಕನಾದರೆ ಎನಗೆ ಆಣೆ, ಅಮ್ಮ
ಮನಸು ಎನ್ನಲಿ ನೆಲೆಸುವಂತೆ ಮಾಡದಿರೆ ನಿನಗೆ ಆಣೆ

ಅಪೋಸಿಷನರ ಸಂಗವ ಮಾಡಿದರೆನಗೆ ಆಣೆ. ಅಮ್ಮ
ಪದವಿ ನೀಡದಿದ್ದರೆ ನಿನಗೆ ಆಣೆ

ಪಾರ್ಟಿ ಸದಸ್ಯರ ಸಂಗವ ತೊರೆದರೆ ಎನಗೆ ಆಣೆ ಅಮ್ಮ
ಪಾರ್ಟಿಯಿಂದ ಹೊರ ಹಾಕಿದರೆ ನಿನಗೆ ಆಣೆ

ಅಮ್ಮಾ ನಿನ್ನಾಶ್ರಯ ತಪ್ಪಿದರೆನಗೆ ಆಣೆ ಅಮ್ಮಾ
ನನಗೆ ನೀನೊಲಿಯದಿದ್ದರೆ ನಿನಗೆ ಆಣೆ

(ದಾಸರೇ ಪ್ಲೀಸ್ ಕಮಿಸಿಬಿಡಿ)
(ಅಮ್ಮಾ: ದೆಹಲಿ, ಬಿಹಾರ, ತಮಿಳುನಾಡು, ಯಾವುದಾದರೂ ಅಮ್ಮ
ಆಣೆ ಮಡಗುತ್ತಿರುವವನು ಸ್ಟೇರ್ ಪುಢಾರಿ)


Down Hole Hammers
&
Button Bits

Reg. No. : CPMG/KA/BGW-544/2003-05


# Mallige Medical Centre

**31/32, Crescent Road, Bangalore 560 001.**
**Phone: 2203333**




# Mahabodhi Mallige Hospital

**T. Mariappa Road, Siddapura,**
**Jayanagar, Bangalore 560 011.**
**Phone: 6565678**

**Fax: 91-80-2265298 E-mail: info@mallige.com**
**Web: http://www.mallige.com**


Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR